www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

**ಸಂಪುಟ–09 ಸಂಚಿಕೆ–08 ಅಗಸ್ಟ್ 2015**
Volume : IX Issue : 08 August 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ನಿಮ್ಮ ಅಧಿಕಾರಗಳು !
3. ಪ್ರಾರ್ಥನಾ ಮನವಿಗಳು
4. ಡಿಜಿಎಮ್ ಬೇತೇಲ್ ಅಂಕಣ
5. ಸ್ಥಳೀಯ ಮತ್ತು ವಿದೇಶ ಸುದ್ಧಿ
6. ಆರೋಗ್ಯ ಸ್ವರ
7. ನೀತಿವಂತನ ಆಶೀರ್ವಾದಗಳು
8. ಆಂತರ್ಯದ ಸೌಂದರ್ಯ
9. ಮಹಿಳೆಯರ ಸ್ವರ
10. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ರಕ್ಷಕನು, ಉದ್ಧಾರಕನು, ನಮ್ಮ ಆಶ್ರಯದುರ್ಗವು ಆಗಿರುವ ಯೇಸುಕ್ರಿಸ್ತನ ಸುಮಧುರ ನಾಮದಲ್ಲಿ ಪ್ರಿಯ ದೇವರ ಸ್ವರ ವಾಚಕರೆಲ್ಲರಿಗೂ ನಮ್ಮ ವಂದನೆಗಳು.

ಪ್ರಿಯ ವಾಚಕರೇ ಯಾಕೋಬನು ದೇವರನ್ನು ನೋಡಿ ಈ ಪ್ರಕಾರ ಹೇಳಿದನು ನೀನು ನನ್ನನ್ನು ಆಶೀರ್ವದಿಸದ ಹೊರತು ನಿನ್ನನ್ನು ಬಿಡುವುದಿಲ್ಲ ಅಂದನು (ಆದಿ. 32:26).

ಅದೇ ಪ್ರಕಾರ ನಾವು ದೇವರ ಸನ್ನಿಧಾನದಲ್ಲಿ ಕೇಳುತ್ತೇವೆ, ದೇವರೇ ನನ್ನ ಜೀವಿತದಲ್ಲಿ ಇಷ್ಟೆಲ್ಲಾ ವಾಗ್ದಾನಗಳನ್ನು ಎಷ್ಟೋ ಸೇವಕರ ಮೂಲಕ ಪ್ರವಾದನೆಗಳನ್ನು ಮಾಡಿದ್ದೀಯಾ ಆದರೆ ನನ್ನಲ್ಲಿ ಯಾವುದು ನೆರವೇರುತ್ತಿಲ್ಲ ಎಂದು ಮನಸೋತವರಾಗಿ ನೀವು ಇರುವುದಾದರೆ ಧೈರ್ಯಗೊಳ್ಳಿರಿ ಯಾಕಂದರೆ ನಮ್ಮ ದೇವರು ಮನುಷ್ಯರ ಹಾಗೆ ಎರಡು ಮಾತಿನವನಲ್ಲ, ಆತನು ಮಾತು ಹೇಳಿದ ಮೇಲೆ ಬದಲಾಗುವವನಲ್ಲ, ನೆರವೇರಿಸುವವನು.

ನಮ್ಮ ಜೀವಿತದಲ್ಲಿ ದೇವರು ಮಾಡಿದ ವಾಗ್ದಾನಗಳು, ಪ್ರವಾದನೆಗಳು ನೆರವೇರಬೇಕಾದರೆ ನಾವು ಮಾಡಬೇಕಾದ ಕಾರ್ಯಗಳು.

1) ದೇವರನ್ನು ನಂಬಬೇಕು
2) ದೇವರ ವಾಕ್ಯವನ್ನು ನಂಬಬೇಕು
3) ಪ್ರಾರ್ಥಿಸುವವರಾಗಿರಬೇಕು
4) ವಾಗ್ದಾನಗಳನ್ನು ನೆನೆಸಿ ಸ್ತುತಿಸುವವರಾಗಿರಬೇಕು
5) ದೇವರ ಸನ್ನಿಧಿಯಲ್ಲಿ ಕಾಯುವವರಾಗಿರಬೇಕು.

ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ; ಮಾನವನಂತೆ ಮನಸ್ಸನ್ನು ಬೇರೆ ಮಾಡಿಕೊಳ್ಳುವವನಲ್ಲ. ತಾನು ಹೇಳಿದ ಮೇರೆಗೆ ನಡೆಯುವದಿಲ್ಲವೋ; ಮಾತುಕೊಟ್ಟ ನಂತರ ನೆರವೇರಿಸುವದಿಲ್ಲವೋ (ಅರಣ್ಯ. 23:19). ವಾಗ್ದಾನವನ್ನು ಯಾವಾಗಲೂ ನೆರವೇರಿಸುವವನೂ (ಕೀರ್ತ. 146:6).

ಈ ಎಲ್ಲಾ ವಾಕ್ಯಗಳನ್ನು ಓದಿ ಧ್ಯಾನಿಸುವುದಾದರೆ ನಮ್ಮ ದೇವರು ನಂಬಿಗಸ್ತನು ಆತನು ವಾಗ್ದಾನಗಳನ್ನು ನೆರವೇರಿಸಲು ಶಕ್ತನಾದವನು ಆದರೆ ನಾವು ನಮ್ಮ ಜೀವಿತದಲ್ಲಿ ದೇವರಿಗೆ ಮೆಚ್ಚಿಗೆ ಪಡಿಸುವ ರೀತಿಯಲ್ಲಿ ನಡೆದರೆ ಆತನು ತನ್ನ ಕಾರ್ಯವನ್ನು ನಮ್ಮಲ್ಲಿ ನೆರವೇರಿಸುತ್ತಾನೆ.

ಇದನ್ನು ಓದುತ್ತಿರುವ ಪ್ರಿಯರೇ, ನೀವು ಎಂಥಹ ಪರಿಸ್ಥಿತಿಯಲ್ಲಿ ಇದ್ದರೂ, ಯಾವುದೇ ಹೋರಾಟದಲ್ಲಿ ಸಿಲುಕಿ ಯಾರಿಗೂ ಗೊತ್ತಿಲ್ಲದ ದುಸ್ಥಿತಿಯಲ್ಲಿ ಇರಬಹುದು ಆದರೆ ನನ್ನ ದೇವರಿಗೆ ಎಲ್ಲವೂ ಗೊತ್ತು ಯಾಕಂದರೆ ಆತನು ಸರ್ವಜ್ಞಾನಿ, ಸರ್ವವ್ಯಾಪಿ ಇಬ್ರಿ. 4:13 ರಲ್ಲಿ ನೋಡುತ್ತೇವೆ ಆತನಿಗೆ ಅಗೋಚರವಾಗಿ ಯಾವುದು ಇಲ್ಲ. ಆತನ ಮುಂದೆ ಎಲ್ಲವೂ ಗೋಚರವಾಗಿರುತ್ತದೆ ಆದುದರಿಂದ ನಿನ್ನ ಅಮೂಲ್ಯ ಜೀವನವನ್ನು ಆತನ ಕೈಗೆ ಒಪ್ಪಿಸಿ, ಆತನ ಮುಂದೆ ತಗ್ಗಿಸಿ ನೀನು ಇರುವಂತಹ ಪರಿಸ್ಥಿತಿಯನ್ನು ಯಥಾಸ್ಥಿತಿಯಲ್ಲಿ ಒಪ್ಪಿಸಿ ಕೊಡುವುದಾದರೆ ಆತನು ನಿನ್ನ ಜೀವಿತದಲ್ಲಿ ತನ್ನ ಕಾರ್ಯವನ್ನು ಸಾಧಿಸಿ ಮುಂದೆ ನಡೆಸುವನು. ಯಾಕಂದರೆ ಆತನು ನಮ್ಮನ್ನು ಬಿಟ್ಟು ಬಿಡುವ ದೇವರಲ್ಲ.

ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ (ಯೋಹಾ. 14:18), ನಾನು ನಿನ್ನನ್ನು ಎಂದಿಗೂ ಕೈಬಿಡುವದಿಲ್ಲ, ಎಂದಿಗೂ ತೊರೆಯುವದಿಲ (ಇಬ್ರಿ. 13:5). ಎಂದಿಗೂ ಕೈಬಿಡದೆ, ಎಂದಿಗೂ ತೊರೆಯದೆ ಇರುವ ದೇವರನ್ನು ನಾವು ಸೇವಿಸುತ್ತಿದ್ದೇವೆ.

ಹಾಗಾದರೆ ಈ ಸಮಯದಲ್ಲಿ ದೇವರನ್ನು ನೋಡಿ ಹೇಳುವ ದೇವರೇ ನನ್ನನ್ನು ನಿನ್ನ ಹಸ್ತಕ್ಕೆ ಒಪ್ಪಿಸುತ್ತೇನೆ. ನನ್ನ ಜೀವಿತದಲ್ಲಿ ನೀನು ಮಾಡಿದ ವಾಗ್ದಾನಗಳು ನೆರವೇರದ ಹಾಗೆ ತಡೆಗಳು ಇದ್ದರೆ ಅದನ್ನು ತೆಗೆದು ಹಾಕು, ನನ್ನನ್ನು ನಿನ್ನ ಮಾರ್ಗದಲ್ಲಿ ಸರಿಯಾಗಿ ನಡೆಸು ಎಂದು ಹೇಳಿ ಒಪ್ಪಿಸಿಕೊಡೋಣ. ಕರ್ತನು ನಿಮ್ಮನ್ನು, ನಿಮ್ಮ ಕುಟುಂಬವನ್ನು ಹೇರಳವಾಗಿ ಆಶೀರ್ವದಿಸಲಿ ಎಂದು ಹಾರೈಸುವವನಾಗಿದ್ದೇನೆ.

"ಕ್ರಿಸ್ತನು ನಮ್ಮನ್ನು ಸ್ವತಂತ್ರದಲ್ಲಿರಿಸಬೇಕೆಂದು ನಮಗೆ ಬಿಡುಗಡೆಮಾಡಿದನು. ಅದರಲ್ಲಿ ಸ್ಥಿರವಾಗಿ ನಿಲ್ಲಿರಿ; ದಾಸತ್ವದ ನೊಗದಲ್ಲಿ ತಿರಿಗಿ ಸಿಕ್ಕಿಕೊಳ್ಳಬೇಡಿರಿ" (ಗಲಾ. 5:1).

ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ನನ್ನ ದೇವರ ಮುಂದೆ ನಿನ್ನ ಕೃತ್ಯಗಳಲ್ಲಿ ಒಂದಾದರೂ ಸಂಪೂರ್ಣವಾದದ್ದೆಂದು ನಾನು ಕಾಣಲಿಲ್ಲ (ಪ್ರಕ. 3:2). ನಾವು ಮಾಡುವ ಪ್ರತಿಯೊಂದು ಕ್ರಿಯೆಗಳನ್ನು ಕರ್ತನು ನೋಡುವಾತನಾಗಿದ್ದಾನೆ. ಅದು ಮಾತ್ರವಲ್ಲದೆ ನಮ್ಮ ಕ್ರಿಯೆಗಳನ್ನು ತೂಗುವಾತನು ಕೂಡ ಆಗಿದ್ದಾನೆ. ಕೃತ್ಯಗಳು ಅಂದರೆ ನಾವು ಮಾಡುವ ಕಾರ್ಯಗಳು ಆಗಿವೆ. ನಾವು ಆತ್ಮೀಕ ಜೀವನದಲ್ಲಿ ಯಾವುದೇ ಕಾರ್ಯಗಳನ್ನು ಆರಂಭಿಸುವುದಾದರೆ ಅದನ್ನು ಸಂಪೂರ್ಣ ಮಾಡಬೇಕು. ಯಾವುದೇ ಕಾರ್ಯವನ್ನು ಅರ್ಧದಲ್ಲಿ ನಿಲ್ಲಿಸಬಾರದು. ಕೆಲವರ ಜೀವಿತ ನೋಡುವಾಗ ಆತ್ಮೀಕವಾಗಿ ಆರಂಭಿಸುತ್ತಾರೆ ಆದರೆ ಶಾರೀರಿಕವಾಗಿ ಮುಗಿಸುತ್ತಾರೆ. ಗಲಾತ್ಯ ಸಭೆಯ ಸಮಸ್ಯೆ ಕೂಡ ಇದೇ ಆಗಿತ್ತು. ಗಲಾ. 3:3 ಕೆಲವರು ಸೇವೆಗೆ ಒಪ್ಪಿಸಿಕೊಡುತ್ತಾರೆ ಕಷ್ಟಗಳು, ನೋವುಗಳು, ಕೊರತೆಗಳು ಬರುವಾಗ ನಿಲ್ಲಲಿಕ್ಕೆ ಆಗಲಾರದೆ ಸೇವೆಯನ್ನೇ ಬಿಟ್ಟು ಬಿಡುತ್ತಾರೆ. ಇನ್ನು ಕೆಲವರು ಬೈಬಲ್ ಸ್ಕೂಲ್‌ಗೆ ಒಂದು ಒಳ್ಳೇ ಉದ್ದೇಶದಿಂದ ಹೋಗುತ್ತಾರೆ ಅರ್ಧದಲ್ಲೇ ಬಿಟ್ಟು ಬಿಡುತ್ತಾರೆ. ಕೆಲವರು ಲೋಕದಾಶೆಗೆ ಒಳಬಿದ್ದು, ಕೆಲವರು ಹಣದಾಶೆಗೆ ಒಳಬಿದ್ದು, ಇನ್ನು ಕೆಲವರು ನೋವು, ದು:ಖ ವೇದನೆಗಳಲ್ಲಿ ಕ್ರಿಸ್ತೀಯ ಜೀವಿತವನ್ನು ಬಿಟ್ಟು ಬಿಡುತ್ತಾರೆ. ಸಾರ್ದಿಸ್ ಸಭೆಯಲ್ಲಿ ಕೂಡ ಇಂಥ ಜನರಿದ್ದರು. ಕ್ರಿಸ್ತನ ಮೂಲಕ ಸಿಕ್ಕಿದ ಆತ್ಮದ ರಕ್ಷಣೆಯು ಅತೀ ಅಮೂಲ್ಯವಾದದ್ದು ಅದನ್ನು ಯಾವುದೇ ಕಾರಣಕ್ಕೂ ನಾವು ಕಳಕೊಳ್ಳವಾರದು. ಎಲ್ಲಾ ಪರಿಸ್ಥಿತಿಗಳಲ್ಲಿ ನಂಬಿಕೆಗಾಗಿ ನಂಬಿಕೆಯಲ್ಲಿ ಸ್ಥಿರವಾಗಿ ನಿಲ್ಲಬೇಕು. ನಾವು ಯಾವುದೇ ಆತ್ಮೀಕ ಕಾರ್ಯವನ್ನು ಆರಂಭಿಸುವಾಗ ಪ್ರಾರ್ಥಿಸಿ ದೇವರ ಚಿತ್ತವನ್ನು ತಿಳುಕೊಂಡು ಆರಂಭಿಸಬೇಕು.

**"ಸ್ವಬುದ್ಧಿಯನ್ನೇ ಆಧಾರ ಮಾಡಿಕೊಳ್ಳದೆ ಪೂರ್ಣ ಮನಸ್ಸಿನಿಂದ ಯೆಹೋವನಲ್ಲಿ ಭರವಸೆಯಿಡು. ನಿನ್ನ ಎಲ್ಲಾ ನಡವಳಿಕೆಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು"** (ಜ್ಞಾನೋ.3:5–6). ಕರ್ತನಾದ ಯೇಸುಕ್ರಿಸ್ತನು ಶಿಷ್ಯನಾಗ ಬೇಕೆಂದಿರುವವನು ಅನುಸರಿಸಬೇಕಾದ ಕೆಲವು ನಿಬಂಧನೆಗಳನ್ನು ಲೂಕ. 14:25–33 ರಲ್ಲಿ ತಿಳಿಸುತ್ತಾನೆ. ಅದರಲ್ಲಿ ಪ್ರಾಮುಖ್ಯವಾದ ಎರಡು ಸಂಗತಿಗಳನ್ನು ಕರ್ತನು ತಿಳಿಸುತ್ತಾನೆ.

1) ಬುರುಜು ಕಟ್ಟುವ ಕುರಿತು

2) ಕಡಿಮೆ ಸೈನ್ಯಬಲ ಇರುವ ಅರಸನು ಹೆಚ್ಚು ಸೈನ್ಯಬಲ ಇರುವ ಅರಸನೊಂದಿಗೆ ಯುದ್ಧ ಮಾಡುವ ಕುರಿತು

ಲೂಕ. 14:28–32 ನಿಮ್ಮಲ್ಲಿ ಯಾವನಾದರೂ ಒಂದು ಬುರುಜನ್ನು ಕಟ್ಟಿಸಬೇಕೆಂದು ಯೋಚಿಸಿದರೆ ಅವನು ಮೊದಲು ಕೂತುಕೊಂಡು ಅದಕ್ಕೆ ಎಷ್ಟು ಖರ್ಚು ಹಿಡಿದೀತು ಅದನ್ನು ತೀರಿಸುವುದಕ್ಕೆ ಸಾಕಾಗುವಷ್ಟು ಹಣ ನನ್ನಲ್ಲಿ ಉಂಟೋ ಎಂದು ಲೆಕ್ಕ ಮಾಡುವುದಿಲ್ಲವೇ? ಹೀಗೆ ಲೆಕ್ಕ ಮಾಡದೆ ಅದಕ್ಕೆ ಅಸ್ತಿವಾರ ಹಾಕಿದ ಮೇಲೆ ಆ ಕೆಲಸವನ್ನು ಪೂರೈಸಲಾರದೆ ಹೋದರೆ ನೋಡುವವರೆಲ್ಲರೂ ಈ ಮನುಷ್ಯನು ಕಟ್ಟುವುದಕ್ಕಂತೂ ತೊಡಗಿದನು ಕೆಲಸ ಪೂರೈಸಲಾರದೇ ಹೋದನು ಎಂದು ಅವನನ್ನು ಹಾಸ್ಯ ಮಾಡಾರು ಇಲ್ಲವೇ ಯಾವ ಅರಸನಾದರೂ ಮತ್ತೊಬ್ಬ ಅರಸನ ಸಂಗಡ ಯುದ್ಧ ಮಾಡುವುದಕ್ಕೆ ಹೋಗುವಾಗ ತನ್ನ ಮೇಲೆ ಇಪ್ಪತ್ತು ಸಾವಿರ ದಂಡು ತೆಗೆದುಕೊಂಡು ಬರುವುದನ್ನು ತಾನು ಹತ್ತು ಸಾವಿರ ದಂಡಿನಿಂದ ಎದುರಿಸುವುದಕ್ಕೆ ಶಕ್ತನಾಗುವೆನೋ ಇಲ್ಲವೋ ಎಂದು ಕೂತುಕೊಂಡು ಆಲೋಚಿಸುವುದಿಲ್ಲವೇ? ತಾನು ಶಕ್ತನಲ್ಲದಿದ್ದರೆ ಬರುವ ಅರಸನು ಇನ್ನು ದೂರದಲ್ಲಿರುವಾಗಲೇ ರಾಯಭಾರಿಗಳನ್ನು ಕಳುಹಿಸಿ ಸಂಧಾನಕ್ಕೆ ಒಪ್ಪಂದವನ್ನು ಕೇಳಿಕೊಳ್ಳುವನು. ಹಾಗಾದರೆ ಕ್ರಿಸ್ತೀಯ ಜೀವಿತವೆಂಬುವಂತಹದು ಅರ್ಧಬರ್ಧ ಜೀವಿತವಲ್ಲ, ಅದು ಸಂಪೂರ್ಣತೆಯಿಂದ ಕೂಡಿರಬೇಕು. ಯೋಹಾ. 5:36ರಲ್ಲಿ ಕರ್ತನಾದ ಯೇಸುಕ್ರಿಸ್ತನು ಈ ರೀತಿ ಹೇಳುತ್ತಿದ್ದಾನೆ, ನನಗಂತೂ ಯೋಹಾನನ ಸಾಕ್ಷಿಗಿಂತ ಹೆಚ್ಚಿನ ಸಾಕ್ಷಿ ಉಂಟು ಹೇಗೆಂದರೆ ಪೂರೈಸುವುದಕ್ಕೆ ತಂದೆ ನನಗೆ ಕೊಟ್ಟಿರುವ ಕೆಲಸಗಳು ಅಂದರೆ ನಾನು ಮಾಡುವ ಕೆಲಸಗಳೇ. ತಂದೆಯು ನನ್ನನ್ನು ಕಳುಹಿಸಿ ಕೊಟ್ಟನೆಂಬುದಾಗಿ ನನ್ನ ವಿಷಯದಲ್ಲಿ ಸಾಕ್ಷಿ ಕೊಡುತ್ತೇವೆ. ಆತ್ಮೀಕದಲ್ಲಿ ಮಾಡುವ ಪರಿಪೂರ್ಣ ಕೆಲಸಗಳು ನಮ್ಮನ್ನು ಕರ್ತನೇ ಕರೆದನು ಮತ್ತು ನಡೆಸುತ್ತಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗಿರುತ್ತವೆ. ಆದುದರಿಂದ ಪ್ರಿಯರೇ, ನಾವು ಸೋತು ಹೋಗದೆ ಅರ್ಧದಲ್ಲಿ ನಮ್ಮ ಕೆಲಸಗಳನ್ನು ನಿಲ್ಲಿಸದೇ, ಅರ್ಧದಲ್ಲಿ ಓಟವನ್ನು ಬಿಡದೇ,

ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು (ಫಿಲಿ. 4:19).

ನೆಹೆಮೀಯನು ತಡೆಗಳ ಮಧ್ಯದಲ್ಲಿ ಪಾಳುಬಿದ್ದಂತಹ. ಯೆರೂಸಲೇಮಿನ ಕೋಟೆಯನ್ನು ಕಟ್ಟಿದ ಹಾಗೆ ಜೆರುಬಾಬೇಲ್ ಮತ್ತು ಸಂಗಡಿಗರು ಪಾಳು ಬಿದ್ದಂತಹ ದೇವಾಲಯವನ್ನು ತಡೆಗಳ ಮಧ್ಯದಲ್ಲಿ ಕಟ್ಟಿದಂತೆ ನಾವೂ ಕೂಡ ಕಟ್ಟೋಣ. ದೇವರು ನಮ್ಮೊಂದಿಗಿದ್ದು ನಮ್ಮ ಕುರಿತು ಒಳ್ಳೆಯ ಸಾಕ್ಷಿಯನ್ನು ಕೊಡುವ ಹಾಗೆ ನಾವು ಒಬ್ಬರಿಗೊಬ್ಬರು ಪ್ರೋತ್ಸಾಹಿಸಿ ದೇವರ ರಾಜ್ಯವನ್ನು ಕಟ್ಟೋಣ.

**"ಆದದರಿಂದ ನೀನು ಹೊಂದಿದ ಉಪದೇಶವನ್ನೂ ಅದನ್ನು ಕೇಳಿದ ರೀತಿಯನ್ನೂ ನೆನಪಿಗೆ ತಂದುಕೊಂಡು ಅದನ್ನು ಕಾಪಾಡಿಕೋ"** (ಪ್ರಕ. 3:3). ಇಂದಿನ ದೇವ ಜನರ ದೊಡ್ಡ ಸಮಸ್ಯೆ ಅಂದರೆ ಉಪದೇಶದಲ್ಲಿ ನೆಲೆಯಾಗಿ ನಿಲ್ಲಲು ಸಾಧ್ಯವಾಗದ ಪರಿಸ್ಥಿತಿ. ಉಪದೇಶ ಕೇಳುತ್ತಾರೆ, ಅರ್ಥ ಮಾಡಿಕೊಳ್ಳುತ್ತಾರೆ ಆದರೆ ಉಪದೇಶದಲ್ಲಿ ಸ್ಥಿರವಾಗಿ ನಿಲ್ಲುವುದಿಲ್ಲ. ಉಪದೇಶದಲ್ಲಿ ನಿಂತರೆ ಲೋಕವನ್ನು ಅನುಭವಿಸಲು ಸಾಧ್ಯವಿಲ್ಲ, ಉಪದೇಶದಲ್ಲಿ ನಿಂತರೆ ಪಾಪ ಮಾಡಲು ಸಾಧ್ಯವಿಲ್ಲ, ಉಪದೇಶದಲ್ಲಿ ನಿಂತರೆ ಶರೀರದ ಇಚ್ಛೆಗಳನ್ನು ಪೂರೈಸಲು ಆಗುವುದಿಲ್ಲ. ಅದಕ್ಕಾಗಿ ಅನೇಕರು ಉಪದೇಶವನ್ನು ಗಾಳಿಗೆ ತೂರಿ ಬಿಟ್ಟಿದ್ದಾರೆ. ಹೆಸರಿಗೆ ಮಾತ್ರ ಕ್ರಿಸ್ತೀಯ ಜೀವಿತವನ್ನು ನಡೆಸುತ್ತಿದ್ದಾರೆ.

**"ಆದದರಿಂದ ನೀವು ಕರ್ತನಾದ ಯೇಸುವೆಂಬ ಕ್ರಿಸ್ತನನ್ನು ಅಂಗೀಕರಿಸಿದಂತೆಯೇ ಆತನಲ್ಲಿದ್ದವರಾಗಿ ನಡೆದುಕೊಳ್ಳಿರಿ. ಆತನಲ್ಲಿ ಬೇರೂರಿಕೊಂಡು ಭಕ್ತಿವೃದ್ಧಿಯನ್ನು ಹೊಂದಿ ನಿಮಗೆ ಬೋಧಿಸಲ್ಪಟ್ಟ ಉಪದೇಶದ ಪ್ರಕಾರವೇ ಕ್ರಿಸ್ತ ನಂಬಿಕೆಯಲ್ಲಿ ನೆಲೆಗೊಂಡ ದೇವರಿಗೆ ಹೆಚ್ಚೆಚ್ಚಾಗಿ ಸ್ತೋತ್ರ ಮಾಡುವವರಾಗಿರಿ"**(ಕೊಲೊ. 2:6–7). **"ಕ್ರಿಸ್ತನನ್ನು ಅನುಸರಿಸದೆ ಮನುಷ್ಯರ ಸಂಪ್ರದಾಯಗಳನ್ನೂ ಪ್ರಾಪಂಚಿಕ ಬಾಲಬೋಧೆಯನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನ ಬೋಧನೆಯಿಂದ ನಿಮ್ಮ ಮನಸ್ಸನ್ನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡರು, ಎಚ್ಚರಿಕೆಯಾಗಿರ್ರಿ"** (ಕೊಲೊ. 2:8).

**"ನೀವು ಕೇಳಿದಂಥ ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸಾರಲ್ಪಟ್ಟಂಥ ಸುವಾರ್ತೆಯಿಂದ ಉಂಟಾದ ನಿರೀಕ್ಷೆಯನ್ನು ಬಿಟ್ಟು ತೊಲಗಿಹೋಗದೆ ಅಸ್ತಿವಾರದ ಮೇಲೆ ನಿಂತು ಸ್ಥಿರವಾಗಿದ್ದು ನಂಬಿಕೆಯಲ್ಲಿ ನೆಲೆಗೊಂಡಿರುವದಾದರೆ ಆ ಪದವಿ ನಿಮಗೆ ಪ್ರಾಪ್ತವಾಗುವದು"** (ಕೊಲೊ. 1:23).

ಕ್ರಿಸ್ತೀಯ ಜೀವಿತದಲ್ಲಿ ಉಪದೇಶ ಮಾತ್ರ ನಮ್ಮನ್ನು ನಂಬಿಕೆಯಲ್ಲಿ, ಪರಿಶುದ್ಧತೆಯಲ್ಲಿ, ಕ್ರಿಸ್ತನಲ್ಲಿ ಸ್ಥಿರವಾಗಿ, ಕ್ರಮವಾಗಿ ನೆಲೆನಿಲ್ಲಿಸುವಂತದ್ದಾಗಿದೆ.

**ಉಪದೇಶದ ಕುರಿತು ಸತ್ಯವೇದ ಏನು ಹೇಳುತ್ತದೆ ?**

**"ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು. ಯಾಕಂದರೆ ಜನರು ಸ್ವಸ್ಥಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ; ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು ಸತ್ಯ ಬೋಧನೆಗೆ ಕಿವಿಗೊಡದೆ ಕಲ್ಪನಾಕಥೆಗಳನ್ನು ಕೇಳುವದಕ್ಕೆ ಹೋಗುವರು. ಆದರೆ ನೀನು ಎಲ್ಲಾ ವಿಷಯಗಳಲ್ಲಿ ಸ್ವಸ್ಥಚಿತ್ತನಾಗಿರು, ಶ್ರಮೆಯನ್ನು ತಾಳಿಕೋ, ಸೌವಾರ್ತಿಕನ ಕೆಲಸವನ್ನು ಮಾಡು, ನಿನಗೆ ನೇಮಿಸಿರುವ ಸೇವೆಯನ್ನು ಲೋಪವಿಲ್ಲದೆ ನಡಿಸು"** (2 ತಿಮೊ. 4:2–5).

ಇಂದು ಸಭೆಯಲ್ಲಿ ಖಂಡಿಸುವಿಕೆ, ಗದರಿಸುವಿಕೆ, ಎಚ್ಚರಿಸುವಿಕೆ ಇಲ್ಲ, ಒಂದು ವೇಳೆ ಬುದ್ಧಿವಾದ ಹೇಳಿದರೆ ವಿಶ್ವಾಸಿಗಳು ಮಾನಸಾಂತರ ಇಲ್ಲದೆ ಆ ಸಭೆಯನ್ನು ಬಿಟ್ಟು ಬೇರೆ ಸಭೆಗಳಿಗೆ ಹೋಗುವರು ಅಂಥ ವ್ಯಕ್ತಿಗಳನ್ನು ಆಹ್ವಾನಿಸುವ ದೇವ ಸೇವಕರು ಕೂಡ ಇಂದಿನ ದಿನಗಳಲ್ಲಿ ಇದ್ದಾರೆ. ನೀನು ನಿನ್ನ ಸಭೆಯನ್ನು ಬಿಟ್ಟು ಯಾಕೆ ಬಂದಿ ಅಲ್ಲಿ ಹೋಗಿ ಸರಿಪಡಿಸಿಕೋ ಆಗಲೇ ನಿನಗೆ ಆಶೀರ್ವಾದ ದೇವರಿಂದ ಬರುವುದು ಎಂದು ಬುದ್ಧಿವಾದ ಹೇಳಿ ಕಳುಹಿಸುವ ಸೇವಕರು ಇಂದಿನ ದಿನಗಳಲ್ಲಿ ಕಡಿಮೆಯಾಗಿದ್ದಾರೆ ಮಾತ್ರವಲ್ಲದೆ ವಿಶ್ವಾಸಿಗಳು ಬಿಟ್ಟು ಬಂದ ಸಭೆಯ ಸೇವಕರನ್ನು ಸಂಪರ್ಕಿಸಿ ಆ ವಿಶ್ವಾಸಿಗಳ ಕುರಿತು ಮಾಹಿತಿ ಕೊಡುವುದು, ಯಾವುದು ಕೂಡ ಇಂದಿನ ದಿನಗಳಲ್ಲಿ ಪಾಲನೆಯಾಗುತ್ತಿಲ್ಲ, ಇದರಿಂದ ವಿಶ್ವಾಸಿಗಳು ಕೆಟ್ಟು ಹೋಗುತ್ತಾರೆ, ಆಶೀರ್ವಾದಗಳನ್ನು ಕಳೆದುಕೊಳ್ಳುತ್ತಾರೆ. ಪಾಪದಲ್ಲಿ ಜೀವಿಸುವ ವಿಶ್ವಾಸಿಗಳಿಗೆ ಆಶೀರ್ವಾದ ಹೇಳುವ ದೇವ ಸೇವಕರು ಇಂದಿನ ದಿನಗಳಲ್ಲಿದ್ದಾರೆ. **"ನನ್ನನ್ನು ಅಸಡ್ಡೆ ಮಾಡುವವರಿಗೆ ನಿಮಗೆ ಶುಭವಾಗುವದು ಎಂಬದಾಗಿ ಯೆಹೋವನು ಅಂದಿದ್ದಾನೆ ಎಂದು**

ಆಗ ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು (ವಿಮೋ. 40:34).

**ಹೇಳುತ್ತಲೇ ಇದ್ದಾರೆ; ಸ್ವಂತ ಹೃದಯದ ಹಟದಂತೆ ನಡೆಯುವವರೆಲ್ಲರಿಗೂ ನಿಮಗೆ ಯಾವ ಕೇಡೂ ಸಂಭವಿಸದು ಎಂದು ನುಡಿಯುತ್ತಾರೆ"** (ಯೆರೆ. 23:17).

ಸಭೆಯು ಇಂದಿನ ದಿನಗಳಲ್ಲಿ ಆರೋಗ್ಯಕರ ಸಭೆಯಾಗಬೇಕಾದಲ್ಲಿ ಆರೋಗ್ಯಕರ ಉಪದೇಶ ಉಪದೇಶಿಸುವ ದೇವ ಸೇವಕರು ಬೇಕು ಮತ್ತು ಉಪದೇಶಕ್ಕೆ ಕಿವಿಗೊಡುವ ವಿಶ್ವಾಸಿಗಳು ಬೇಕು. ಮೇಲಿನ ವಾಕ್ಯಗಳಲ್ಲಿ ಇನ್ನೊಂದು ನಾವು ಕಾಣಬಹುದು ಯಾಕಂದರೆ ಜನರು ಸ್ವಸ್ಥ ಬೋಧನೆಯನ್ನು ಸಹಿಸಲಾರದ ಕಾಲ ಬರುತ್ತದೆ ಅದರಲ್ಲಿ ಅವರು ತೀಟೆಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು.

ಇಂದಿನ ದಿನಗಳಲ್ಲಿ ದೇವ ಸೇವಕರು ಸತ್ಯವೇದಕ್ಕನುಗುಣವಾದ ಉಪದೇಶವನ್ನು ಕೊಡುವುದಾದರೆ ಅನೇಕ ವಿಶ್ವಾಸಿಗಳು ಕೇಳುವುದಕ್ಕೆ ಇಷ್ಟಪಡುವುದಿಲ್ಲ. ತಮಗೆ ತಕ್ಕ ಉಪದೇಶಕರನ್ನು ಹುಡುಕುತ್ತಾ ಹೋಗುತ್ತಾರೆ. ನೀನು ಮದ್ಯಪಾನ ಮಾಡಬಹುದು, ನೀನು ಧೂಮಪಾನ ಮಾಡಬಹುದು, ನೀನು ವ್ಯಭಿಚಾರ ಮಾಡಬಹುದು, ನೀನು ವಿವಾಹ ವಿಚ್ಛೇದನಾ ಮಾಡಬಹುದು, ನೀನು ವಿಗ್ರಹಾರಾಧನೆ ಮಾಡಬಹುದು, ನೀನು ದೀಕ್ಷಾಸ್ನಾನ ತೆಗೆದುಕೊಳ್ಳದಿದ್ದರೆ ತೊಂದರೆ ಇಲ್ಲ, ನೀನು ಪ್ರಾರ್ಥಿಸದಿದ್ದರೆ ತೊಂದರೆ ಇಲ್ಲ, ನೀನು ಪರಿಶುದ್ಧನಾಗಿ ಜೀವಿಸದಿದ್ದರೆ ತೊಂದರೆ ಇಲ್ಲ, ನೀನು ಪ್ರೀತಿಸಿ ಮದುವೆಯಾದರೆ ತೊಂದರೆ ಇಲ್ಲ, ನೀನು ಶರೀರದ ಅಂಗಗಳು ಕಾಣುವ ಹಾಗೆ ಬಟ್ಟೆಯನ್ನು ಧರಿಸಿದರೆ ತೊಂದರೆ ಇಲ್ಲ ಎಂದು ಹೇಳುವಂತಹ ಉಪದೇಶಕರನ್ನು ಜನರು ಹುಡುಕಿ ಹೋಗುತ್ತಾರೆ. ದು:ಖಕರ ಸಂಗತಿ ಏನೆಂದರೆ ಅಂಥ ಉಪದೇಶಕರು ಇಂದಿನ ದಿನಗಳಲ್ಲಿ ಧಾರಳವಾಗಿದ್ದಾರೆ. ಕೆಲವರು ಹೊಟ್ಟೆ ಹೊರೆದುಕೊಳ್ಳಲು, ಇನ್ನು ಕೆಲವರು ಹೆಸರಿಗೆ ಸೇವಕರಾಗಿದ್ದಾರೆ.

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

**ಡಿಜಿಎಮ್ ಬೇತೇಲ್**

# 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧುವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

**ಪ್ರಾರ್ಥನಾ ಗೋಪುರದ ವಿಳಾಸ :**

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ, ರಕ್ಷಣಾಪುರ ಕಂಪೌಂಡ್,
ಇನ್ನಂಜೆ ಗ್ರಾಮ, ಉಡುಪಿ – 574115. ದೂರವಾಣಿ : 0091 820 2559886**

ಮನುಷ್ಯನ ಆತ್ಮವು ಯೆಹೋವನ ದೀಪವಾಗಿದೆ.
ಅದು ಅಂತರಂಗವನ್ನೆಲ್ಲಾ ಶೋಧಿಸುತ್ತದೆ (ಜ್ಞಾನೋ. 20:27).

# ನಿಮ್ಮ ಅಧಿಕಾರಗಳು !

"ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ, ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ. ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ. ನೀನು ಎಲ್ಲಾ ಕುರಿದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು, ಆಕಾಶ ಪಕ್ಷಿಗಳು, ಸಮುದ್ರದ ಮೀನುಗಳು ಅದರಲ್ಲಿ ಸಂಚರಿಸುವ ಸಕಲವಿಧವಾದ ಜೀವಜಂತುಗಳು, ಇವೆಲ್ಲವನ್ನೂ ಅವನಿಗೆ ಅಧೀನಮಾಡಿದ್ದೀಯಲ್ಲವೇ" (ಕೀರ್ತ. 8:5–8).

ಮನುಷ್ಯನನ್ನು ಸೃಷ್ಟಿಸಿದ ಕೂಡಲೇ ಕರ್ತನು ಮಾಡಿದ ಮೊದಲ ಕಾರ್ಯ ಅವನನ್ನು ಮನಸಾರೆ ಆಶೀರ್ವದಿಸಿದ್ದು. ಆಳ್ವಿಕೆಯನ್ನೂ, ಅಧಿಕಾರವನ್ನೂ ಅವನಿಗೆ ನೀಡಿದ್ದು. ನಂತರ ಅವನನ್ನು ನೋಡಿ, "ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ. ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ಧೋರೆತನ ಮಾಡಿರಿ" ಎಂದು ಹೇಳಿದನು (ಆದಿ. 1:28).

ಎಲ್ಲ ಸೃಷ್ಟಿಯಲ್ಲೂ, ಶ್ರೇಷ್ಠವಾದ ಸೃಷ್ಟಿ, ಮನುಷ್ಯನ ಸೃಷ್ಟಿಯೇ. ಮನುಷ್ಯನೊಳಗೆ ಮಾತ್ರವೇ ತನ್ನ ಮೂಗಿನ ಶ್ವಾಸವನ್ನು ಊದಿ, ಅವನನ್ನು ಜೀವಾತ್ಮನನ್ನಾಗಿಸಿದನು. ಸಂಜೆಯ ತಂಗಾಳಿಯ ವೇಳೆಯಲ್ಲಿ ಅವನೊಂದಿಗೆ ಸಂಚರಿಸಿದನು. ಯಾವ ದೇವದೂತನೊಂದಿಗಾಗಲಿ, ಯಾವ ಮೃಗಜೀವಿಯೊಂದಿಗಾಗಲಿ ಆತನು ಸಂಚರಿಸಲಿಲ್ಲ. ಅರಸನಾದ ದಾವೀದನು ಒಂದು ದಿನ ಕರ್ತನು ಮನುಷ್ಯನಿಗೆ ತೋರಿಸುವ ಪ್ರೀತಿಯನ್ನೂ, ಕೃಪೆಯನ್ನೂ, ದಯೆಯನ್ನೂ ನೆನಸಿ ನೋಡಿದನು. ಕರ್ತನ ಸೃಷ್ಟಿಕಾರ್ಯ ಮಹತ್ತರವಾದದ್ದಾದರೂ, ಮನುಷ್ಯನ ಮೇಲೆ ಇಟ್ಟ ಪ್ರೀತಿ ಅದಕ್ಕಿಂತ ದೊಡ್ಡದಾಗಿರುವದನ್ನು ಕಂಡನು. "ನಿನ್ನ ಕೈಕೆಲಸವಾಗಿರುವ ಆಕಾಶ ಮಂಡಲವನ್ನು ನೀನು ಉಂಟುಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು ನೋಡವಾಗ ಮನುಷ್ಯನು ಎಷ್ಟು ಮಾತ್ರದವನು ಅವನನ್ನು ನೀನು ಏಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? (ಕೀರ್ತ. 8:3–4) ಎಂದು ಹೇಳುತ್ತಾನೆ.

ಕರ್ತನು ಮನುಷ್ಯನನ್ನು ತನ್ನ ಸಾರೂಪ್ಯದಲ್ಲಿ ಸೃಷ್ಟಿಸಿದ್ದು ಮಾತ್ರವಲ್ಲ, ತಾನು ಸೃಷ್ಟಿಸಿದ ಎಲ್ಲ ಜೀವರಾಶಿಗಳನ್ನು ಆಳುವ ಅಧಿಕಾರವನ್ನು ನೀಡಿದನು. ದೇವರ ಮಕ್ಕಳಾದ ನೀವು ನಿಮಗೆ ಕೊಟ್ಟಿರುವ ಅಧಿಕಾರಗಳನ್ನು ಅರಿತುಕೊಳ್ಳಬೇಕು. ನೀವು ಆಳ್ವಿಕೆ ನಡೆಸಲು ಹುಟ್ಟಿದವರು. ಅಧಿಕಾರವನ್ನು ಮಾತ್ರವಲ್ಲ, ಅದನ್ನು ಉಪಯೋಗಿಸುವ ಶಕ್ತಿಯನ್ನೂ ನೀಡಿರುವನು. ಆದ್ದರಿಂದಲೇ ನಿಮ್ಮನ್ನು ಮೇಲಿನಿಂದ ಬರುವ ಉನ್ನತ ಬಲದಿಂದ ತುಂಬುವನು. ನಾನು ಮೂರುವರುಷದ ಮಗುವಾಗಿದ್ದಾಗ ಟೈಫಾಯಿಡ್ ಜ್ವರ ಬಂದು ನನ್ನ ಒಂದು ಕಾಲು ಪೋಲಿಯೋದಿಂದ ಊನವಾಯಿತು. ಶಾಲೆಗೆ ಹೋದಾಗ ಇತರರು ನನ್ನನ್ನು ಕುಂಟ, ಕುಂಟ ಎಂದು ಗೇಲಿ ಮಾಡುತ್ತಿದ್ದದರಿಂದ ನನ್ನ ಮನಸ್ಸು ನೊಂದುಹೋಯಿತು. ಕೀಳರಿಮೆ ಕಾಡಲಾರಂಭಿಸಿತು. ಆದರೆ ಒಂದು ದಿನ ಬಂದಿತು. ಯೇಸುಕ್ರಿಸ್ತನ ಕಲ್ವಾರಿಯ ಪ್ರೀತಿಯನ್ನು ಅರಿತೆನು. ನನ್ನನ್ನು ತುಂಬುಹೃದಯದಿಂದ ಪ್ರೀತಿಸುವಾತನೊಬ್ಬನಿರುವನೆಂಬುದನ್ನು ಅರಿತೆನು. ಆತನು ನನಗಾಗಿ ಕಲ್ವಾರಿ ಶಿಲುಬೆಯಲ್ಲಿ ಮಾಡಿದ ತ್ಯಾಗವು ನನ್ನ ಹೃದಯವನ್ನು ಕರಗಿಸಿತು. ಯೇಸುಕ್ರಿಸ್ತನ ರಕ್ತವು ನನ್ನನ್ನು ತೊಳೆದು, ಅಮೂಲ್ಯವಾದವನನ್ನಾಗಿ ಮಾರ್ಪಡಿಸಿಬಿಟ್ಟಿತು. ನಾನು ರಾಜಾಧಿರಾಜನ ಮಗನೆಂಬ ಭಾವನೆ ನನ್ನಲ್ಲಿ ಉಂಟಾಯಿತು. ಒಂದು ದಿನ ಪವಿತ್ರಾತ್ಮನ ಅಭಿಷೇಕ ನನ್ನನ್ನು ತುಂಬಿದಾಗ, ಅದುವರೆಗೆ ಇದ್ದ ಕೀಳರಿಮೆ ಎಲ್ಲಿ ಹೋಯಿತೋ ನನಗೆ ತಿಳಿಯದು. ಅಪರಿಮಿತವಾದ ಸಂತೋಷದಿಂದ ಕರ್ತನು ನನ್ನನ್ನು ತುಂಬಿಸಿದನು. ಅನಂತರ ಯಾವದನ್ನೂ ಕುರಿತು ನಾನು ಚಿಂತಿಸಲಿಲ್ಲ. ಸತ್ಯವೇದವನ್ನು ಓದುತ್ತಾ, ಓದುತ್ತಾ ಕರ್ತನು ತನ್ನ ಮಕ್ಕಳಾಗಿ ನಮ್ಮನ್ನು ಎಷ್ಟು ಘನಪಡಿಸುತ್ತಾನೆ, ಎಷ್ಟು ಅಧಿಕಾರವನ್ನು, ಬಲವನ್ನು ನೀಡುವನು ಎಂಬುದನ್ನು ಅರಿಯುವಾಗ, ನನ್ನ ಹೃದಯ ಆನಂದಪರವಶಗೊಂಡಿತು.

ಪ್ರತಿಯೊಬ್ಬ ವಿಶ್ವಾಸಿಯೂ ತಾನು ಯಾರು? ತನಗೆ ಕರ್ತನು ಕೊಟ್ಟಿರುವ ಅಧಿಕಾರ ಏನು? ಬಲವೇನು? ಆಳ್ವಿಕೆ ಏನು? ಎಂಬುದನ್ನು ಅರಿತುಕೊಳ್ಳಬೇಕು. ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ತಮ್ಮ ಅಧಿಕಾರವೇನು? ಎಂಬುದು ತಿಳಿಯದೇ ಹೋದರೆ, ಸರ್ಕಾರ ತಮಗೆ ಕೊಟ್ಟ ಅಧಿಕಾರವನ್ನು ಉಪಯೋಗಿಸಲು ಸಾಧ್ಯವಿಲ್ಲ. ಇಂದು ಅನೇಕ

ಯೆಹೋವನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾಗಿರುವದು
(2 ಪೂರ್ವ. 5:13).

ವಿಶ್ವಾಸಿಗಳು ಕರ್ತನು ತಮಗೆ ಕೊಟ್ಟ ಅಧಿಕಾರವನ್ನು ತಿಳಿಯದೇ ಇರುವದರಿಂದ ಕತ್ತಲೆಯಲ್ಲಿ, ದಾಸತ್ವದಲ್ಲಿ ಬದುಕುತ್ತಿರುವರು. ಬಿಡುಗಡೆ ಹೊಂದುವ ಮಾರ್ಗ ತಿಳಿಯದಾಗಿರುವರು. ಅಧಿಕಾರದಿಂದ ಬಲ ಬರುವದು. ವಿದ್ಯುತ್ಛಕ್ತಿಯಿಂದ ಬಲ್ಬುಗಳು ಉರಿಯುವದು. ಹಾಗೆಯೇ ಕ್ರಿಸ್ತನ ಮೂಲಕವಾಗಿಯೂ ಅಧಿಕಾರ ಬರುವದು, ಆಳ್ವಿಕೆ ಬರುವದು, ಶಕ್ತಿ ಬರುವದು.

ಹಳೆಯ ಒಡಂಬಡಿಕೆಯಲ್ಲಿ, ಆದಾಮನು ತನ್ನ ಪಾಪದಿಂದಲೂ, ಅವಿಧೇಯತೆಯಿಂದಲೂ ಯಾವುದೆಲ್ಲವನ್ನೂ ಕಳೆದುಕೊಂಡನೋ ಅವೆಲ್ಲವುಗಳನ್ನು ಮನುಷ್ಯನು ಹಿಂದಕ್ಕೆ ಪಡೆಯುವಂತೆ ಯೇಸುಕ್ರಿಸ್ತನು ಈ ಭೂಮಿಗೆ ಬಂದನು. ಕಳೆದು ಹೋದದ್ದನ್ನು ಹುಡುಕಲು, ರಕ್ಷಿಸಲೆಂದೇ ಮನುಷ್ಯ ಕುಮಾರನು ಬಂದಿರುವನು (ಲೂಕ. 19:10). ಒಬ್ಬ ಮನುಷ್ಯನಾದ ಆದಾಮನ ಅವಿಧೇಯತೆಯಿಂದ ಪಾಪವು ಲೋಕದಲ್ಲಿ ಜನಿಸಿತು. ಕ್ರಿಸ್ತನ ವಿಧೇಯತೆಯ ಮೂಲಕ ನಾವು ಕಳೆದುಕೊಂಡದ್ದನ್ನು ಪಡೆಯುವೆವು. ಕಲ್ವಾರಿ ಯುದ್ಧದಲ್ಲಿ ಕ್ರಿಸ್ತನು ಸೈತಾನನನ್ನು ಜಯಿಸಿದನು. ತನ್ನ ಹಿಮ್ಮಡಿಯಿಂದ ಸೈತಾನನ ತಲೆಯನ್ನು ಜಜ್ಜಿದನು. ಕರ್ತನು ಸೈತಾನನ ಮೇಲೂ, ದೆವ್ವಗಳ ಮೇಲೂ, ದುಷ್ಟ ಶಕ್ತಿಗಳ ಮೇಲೂ ನಿಮಗೆ ಅಧಿಕಾರವನ್ನು ಕೊಟ್ಟಿರುವನು. "ನೋಡಿರಿ, ಹಾವುಗಳನ್ನೂ, ಚೇಳುಗಳನ್ನೂ, ವೈರಿಯ ಸಮಸ್ತ ಬಲವನ್ನೂ ತುಳಿದುಹಾಕುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ. ಯಾವದೂ ನಿಮಗೆ ಕೇಡು ಮಾಡುವದೇ ಇಲ್ಲ" (ಲೂಕ. 10:19). ಎಂಬುದು ಕರ್ತನ ವಾಗ್ದಾನವಾಗಿದೆ.

ದೇವಮಕ್ಕಳೇ, ಕರ್ತನು ನಿಮಗೆ ಕೊಟ್ಟಿರುವ ಅಧಿಕಾರವನ್ನು ಪಡೆದುಕೊಳ್ಳಿರಿ. "ಸೈತಾನನ ಕೆಲಸಗಳನ್ನು ಲಯ ಮಾಡುವದಕ್ಕೋಸ್ಕರವೇ ಪ್ರತ್ಯಕ್ಷನಾದ ದೇವಕುಮಾರನು ನಿಮ್ಮ ರಕ್ಷಕನಾಗಿರುವನು" (1 ಯೋಹಾ. 3:8).

ಸಂಗ್ರಹ.

---

**ಪ್ರಾರ್ಥನಾ ಮನವಿಗಳು**

- ದೇವರ ಸ್ವರ ಮಾಸ ಪತ್ರಿಕೆಯ ಸೇವೆಗಾಗಿ ಪ್ರಾರ್ಥಿಸಿರಿ.
- ಮಕ್ಕಳು ಎಲ್ಲಾ ವಿಷಯಗಳಲ್ಲೂ ಪ್ರತಿಭಾವಂತರಾಗಿ ಬೆಳಗಲು (ಯೆಶಾ. 54:13)
- ಪ್ರತಿ ಕುಟುಂಬದಲ್ಲೂ ದೇವಪ್ರೀತಿ ಸುರಿಸಲ್ಪಡುವಂತೆ (ರೋಮ. 5:5).
- ಮಕ್ಕಳು ಎಣ್ಣೇ ಮರದ ಸಸಿಗಳಂತೆ ಬೆಳೆಯಲೂ
- ಅವರ ಭವಿಷ್ಯಕ್ಕಾಗಿ, ಅವರ ಆರೋಗ್ಯಕ್ಕಾಗಿ
- ಮಕ್ಕಳು ದೇವ ಜ್ಞಾನದಲ್ಲೂ ಭಯದಲ್ಲೂ ಬೆಳೆಯಲು ಪ್ರಾರ್ಥಿಸಿರಿ.
- ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ಪ್ರತಿಯೊಂದು ವಸ್ತುಗಳ ಬೆಲೆಗಳು ಕಡಿಮೆಯಾಗುವಂತೆ
- ಕರ್ತನ ಬರೋಣ ಹತ್ತಿರವಿರುವುದರಿಂದ ಪ್ರತಿಯೊಬ್ಬರು ಕರ್ತನ ಬರೋಣಕ್ಕೆ ಸಿದ್ಧರಾಗುವಂತೆ, ತಮ್ಮ ತಮ್ಮ ರಕ್ಷಣೆಯನ್ನು ಕಾಪಾಡಿಕೊಳ್ಳಲು ಕರ್ತನು ಬಲಪಡಿಸುವಂತೆ ಪ್ರಾರ್ಥಿಸಿರಿ.
- ನಮ್ಮ ದೇಶದಲ್ಲಿರುವ ಬರಗಾಲ, ಬಡತನ, ನಿರುದ್ಯೋಗ ಸಮಸ್ಯೆಗಳು ನೀಗುವಂತೆ.

**ವಿಶೇಷ ಸೂಚನೆ**

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091–820 2002781, 0091–9902334941, 0091–9964070654, 0091–820 2559712.**

ನಾವು ಆತನ ಮಹಿಮೆಯನ್ನು ನೋಡಿದೆವು. ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ (ಯೋಹಾ. 1:14).

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ದೂರ ಸಂಪರ್ಕ ನೀತಿಯಲ್ಲಿಯ ಲೋಪದೋಷ, ದೂರ ಸಂಪರ್ಕ ಇಲಾಖೆಯ ತಪ್ಪು ನಿರ್ಧಾರ ಮತ್ತು ಅವ್ಯವಹಾರಗಳಿಂದಾಗಿ ಸರ್ಕಾರದ ಬೊಕ್ಕಸಕ್ಕೆ ರೂ. 31 ಸಾವಿರ ಕೋಟಿ ನಷ್ಟವಾಗಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಬಹಿರಂಗ ಪಡಿಸಿದೆ.

- ರಾಜ್ಯದಲ್ಲಿ ಅತಿ ಹೆಚ್ಚು ವಾಯುಮಾಲಿನ್ಯ ಹಾಗೂ ಶಬ್ಧಮಾಲಿನ್ಯ ಉಂಟು ಮಾಡುತ್ತಿದ್ದ 17.149 ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ, 68.32 ಲಕ್ಷ ರೂ. ದಂಡ ವಸೂಲಿ ಮಾಡಲಾಗಿದೆ ಎಂದು ಸಾರಿಗೆ ಆಯುಕ್ತರು ತಿಳಿಸಿದ್ದಾರೆ.

- 2014ನೇ ವರ್ಷದಲ್ಲಿ ಉಗ್ರರಿಂದ ಬೆಚ್ಚಿಬೀಳಿಸುವಷ್ಟು ಅತ್ಯಾಚಾರ, ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮದುವೆಗಳು ನಡೆದಿವೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾನ್ ಕಿ ಮೂನ್ ತಿಳಿಸಿದ್ದಾರೆ.

- ಭೂಕಂಪದಲ್ಲಿ ನೆಲಸಮವಾಗಿರುವ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಕಟ್ಟಡಗಳನ್ನು ಇನ್ನು 2 ವರ್ಷಗಳಲ್ಲಿ ಮರು ನಿರ್ಮಾಣ ಮಾಡಲಾಗುವುದು ಎಂದು ನೇಪಾಳದ ಪ್ರಧಾನಿ ಸುಶಿಲ್ ಕೊಯಿರಾಲಾ ಹೇಳಿದ್ದಾರೆ.

- ಸ್ಪೇನ್‌ನ ಟೆನಿಸ್ ಆಟಗಾರ ರಫೆಲ್ ನಡಾಲ್‌ಗೆ ಮ್ಯಾಡ್ರಿಡ್‌ನ ಯೂರೋಪ್ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ವಿಶ್ವ ಕ್ರಮಾಂಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ನಡಾಲ್‌ಗೆ ಈ ಗೌರವ ಪ್ರಧಾನ ಮಾಡಲಾಯಿತು.

- ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ 4ನೇ ದಕ್ಷಿಣ ಏಷ್ಯಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತಂಡ, ತನ್ನ ಚಾಂಪಿಯನ್ ಪಟ್ಟವನ್ನು ತನ್ನಲ್ಲೇ ಉಳಿಸಿಕೊಂಡಿದೆ. ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಸೋಲಿಸಿದ ಭಾರತ, 93–44 ಅಂಕಗಳ ಅಂತರದಲ್ಲಿ ಜಯ ಸಾಧಿಸಿ, ಸತತ 2ನೇ ಬಾರಿಗೆ ಪ್ರಶಸ್ತಿಯನ್ನು ಗೆದ್ದ ಸಾಧನೆ ಮಾಡಿತು.

- ಚೀನಾದಿಂದ ಪ್ಲಾಸ್ಟಿಕ್ ಅಕ್ಕಿ ಆಮದು ಆಗುತ್ತಿದ್ದು, ಭಾರತದಲ್ಲಿ ನೈಜ ಅಕ್ಕಿಯೊಂದಿಗೆ ಬೆರೆಸಿ ಮಾರಲಾಗುತ್ತಿದೆ ಎಂದು ಆರೋಪಿಸಿ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಲು ದಿಲ್ಲಿ ಹೈಕೋರ್ಟ್ ಸಮ್ಮತಿಸಿದ್ದು, ಮಾದರಿ ಪರೀಕ್ಷೆಗೆ ಸೂಚಿಸಿದೆ.

- ಇಡೀ ದೇಶವನ್ನೇ ಬೆಚ್ಚಿ ಬೀಳಿಸಿರುವ ವ್ಯಾಪಂ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಲು ನನ್ನದೇನೂ ಅಭ್ಯಂತರ ಇಲ್ಲ. ಹೈಕೋರ್ಟ್ ಒಪ್ಪಿದರೆ ಪ್ರಕರಣವನ್ನು ಸಿಬಿಐ ಸೇರಿದಂತೆ ಯಾವುದೇ ತನಿಖಾ ಸಂಸ್ಥೆಗೆ ಒಪ್ಪಿಸಲು ಸಿದ್ಧ ಎಂದು ಮಧ್ಯಪ್ರದೇಶದ ಮುಖ್ಯ ಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

- ರಷ್ಯಾದಲ್ಲಿ ಸೇಫ್ ಸೆಲ್ಫಿ ಜಾಗೃತಿ ಅಭಿಯಾನ ಪ್ರಾರಂಭವಾಗಿದೆ. ಹೇಗೆಲ್ಲಾ ಸೆಲ್ಫಿಗಳನ್ನು ತೆಗೆದುಕೊಳ್ಳಬಾರದೆಂಬ ಫಲಕಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ಅಳವಡಿಸಲಾಗಿದೆ. ರೈಲ್ವೆ ಗೇಟ್ ಪಕ್ಕದಲ್ಲಿ ನಿಂತು, ಗನ್‌ಅನ್ನು ತಲೆಗೆ ಗುರಿಯಾಗಿಟ್ಟುಕೊಂಡು, ಅಪಾಯಕಾರಿ ಸ್ಥಳಗಳ ಅಂಚಲ್ಲಿ ನೀಮತು ಸೆಲ್ಫಿಗಳನ್ನು ತೆಗೆದುಕೊಳ್ಳಬಾರದೆಂಬ ಫಲಕಗಳನ್ನು ರಷ್ಯಾದ ಪೊಲೀಸರು ಅಳವಡಿಸಿದ್ದಾರೆ.

- ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿ ವಲಯದ ಪಾಲುದಾರಿಕೆಗೆ ಮುಕ್ತ ಅವಕಾಶ ನೀಡಲು ಭಾರತ ಮತ್ತು ಬಾಂಗ್ಲಾದೇಶ ಒಪ್ಪಿಗೆ ನೀಡಿವೆ.

- ಅಮೆರಿಕದ ಹಲವು ಅನಿವಾಸಿ ಭಾರತೀಯರು ಸೇರಿ ಆಂಧ್ರಪ್ರದೇಶದ 2400ರಕ್ಕೂ ಹೆಚ್ಚು ಗ್ರಾಮಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲು ನಿರ್ಧರಿಸಿದ್ದಾರೆ. ಈ ಹಳ್ಳಿಗಳನ್ನು 'ಸುಂದರ ಗ್ರಾಮ ಸುಂದರ ವಾರ್ಡ್' ಕಾರ್ಯಕ್ರಮದಡಿ ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಯೆರೂಸಲೇಮೆಂಬ ಪರಿಶುದ್ಧ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದು ಬರುವುದನ್ನು ನನಗೆ ತೋರಿಸಿದನು (ಪ್ರಕ. 21:10).

# ಬೆಳ್ಳುಳ್ಳಿಯ ಆರೋಗ್ಯಕರ ಪ್ರಯೋಜನಗಳು

ಆರೋಗ್ಯ ಸ್ವರ

ಬೆಳ್ಳುಳ್ಳಿ ಭಾರತೀಯ ಶೈಲಿಯ ಅಡುಗೆಯಲ್ಲಿ ಹೆಚ್ಚು ಬಳಕೆಯಾಗುವಂತಹ ಒಂದು ಮಸಾಲೆ ಪದಾರ್ಥ. ಬೆಳ್ಳುಳ್ಳಿಯು ಆಹಾರಕ್ಕೆ ಒಂದು ವಿಶಿಷ್ಟ ಸ್ವಾದವನ್ನು ಕೊಡುವುದಷ್ಟೇ ಅಲ್ಲದೆ, ಇದರ ಸಣ್ಣ ಬಿಳಿಯ ಎಸಳುಗಳು ಅನೇಕ ವಿಶೇಷ ರೀತಿಯ ಔಷಧೀಯ ಗುಣಗಳನ್ನೂ ಸಹ ಹೊಂದಿವೆ. ಬೆಳ್ಳುಳ್ಳಿಯನ್ನು ಅನೇಕ ವರ್ಷಗಳಿಂದಲೂ ಸಹ ವಿವಿಧ ಕಾಯಿಲೆಗಳಲ್ಲಿ ಚಿಕಿತ್ಸೆಗಾಗಿ ಬಳಸುತ್ತಿದ್ದರು. ಈ ಎಲ್ಲಾ ಕಾರಣಗಳಿಂದಾಗಿ ಬೆಳ್ಳುಳ್ಳಿ ಎನ್ನುವುದು ನಿಮ್ಮ ಅಡುಗೆ ಮನೆಯಲ್ಲಿರುವ ಕೆಲವು ಪ್ರಯೋಜನಕಾರಿ ಅಂಶಗಳನ್ನು ಒಳಗೊಂಡಿರುವ ಒಂದು ಔಷಧೀಯ ಸಾಮಗ್ರಿ.



**ಬೆಳ್ಳುಳಿಗೆ ವಿಶಿಷ್ಟತೆಯನ್ನು ನೀಡಿರುವ ಅಂಶ ಯಾವುದು?**

ಬೆಳ್ಳುಳ್ಳಿಯು ವಿವಿಧ ರೀತಿಯ ಬಲವಾದ ಸಲರ್‌ಯುಕ್ತ ಅಂಶಗಳನ್ನು ಒಳಗೊಂಡಿದ್ದು, ಈ ಕಾರಣದಿಂದಾಗಿಯೇ ಬೆಳ್ಳುಳ್ಳಿಗೆ ತೀಕ್ಷ್ಣವಾಸನೆ ಇದೆ.

ಬೆಳ್ಳುಳ್ಳಿಯ ಎಸಳಿನಲ್ಲಿರುವ ಅಲ್ಲಿಸಿನ್ ಎಂಬ ಅಂಶವು ವಿಶೇಷ ರೀತಿಯ ಆಂಟಿ–ಫಂಗಲ್, ಆಂಟಿ–ಆಕ್ಸಿಡಾಂಟ್, ಆಂಟಿ ವೈರಲ್, ಆಂಟಿ ಬ್ಯಾಕ್ಟೀರಿಯಲ್ ಗುಣಲಕ್ಷಣಗಳಿಗೆ ಕಾರಣವಾಗಿರುವ ಒಂದು ಅಂಶ. ಹಾಗಾಗಿ ಈ ಬೆಳ್ಳುಳ್ಳಿಯನ್ನು ಚಿಕ್ಕದಾಗಿ ಕತ್ತರಿಸಿ, ಜಜ್ಜಿ ಅಥವಾ ರಸತೆಗೆದು ಉಪಯೋಗಿಸುವುದು ಹೆಚ್ಚು ಗುಣಕಾರಿಯಾಗಿರುತ್ತದೆ. ಬೆಳ್ಳುಳ್ಳಿಯಲ್ಲಿ ಸೆಲಿನಿಯಂ ಅಂಶವೂ ಸಹ ಸಮೃದ್ಧವಾಗಿರುತ್ತದೆ.

ಅಲ್ಲಿಸಿನ್ ಜತೆಗೆ ಇನ್ನಿತರ ಅಂಶಗಳಾದ ಅಜೋಯಿನ್, ಅಲ್ಲೀನ್ ಇತ್ಯಾದಿ ಅಂಶಗಳನ್ನೂ ಸಹ ಬೆಳ್ಳುಳ್ಳಿಯು ಒಳಗೊಂಡಿದ್ದು, ಇದು ನಿಮ್ಮ ರಕ್ತಪರಿಚಲನೆ, ಜೀರ್ಣಾಂಗ ಮತ್ತು ರೋಗ ಪ್ರತಿರೋಧಕ ವ್ಯವಸ್ಥೆಗಳಿಗೆ ಉಪಶಮನಕಾರಿ ಪರಿಣಾಮವನ್ನು ಒದಗಿಸುತ್ತದೆ ಮತ್ತು ರಕ್ತದೊತ್ತಡ ಹಾಗೂ ದೇಹದ ನಂಜು ಇತ್ಯಾದಿಗಳನ್ನು ತಗ್ಗಿಸಲು ಸಹಾಯ ಮಾಡುತ್ತದೆ.

ಒಂದು ವೇಳೆ ನೀವು ಈಗಾಗಲೇ ಬೆಳ್ಳುಳ್ಳಿಯನ್ನು ಇಷ್ಟ ಪಡದವರಾಗಿದ್ದರೆ, ಈ ಲೇಖನವನ್ನು ಓದಿ ಮುಗಿಸಿದ ಅನಂತರ ನಿಮ್ಮ ಅಡುಗೆ ಮನೆಯಲ್ಲಿ ಖಂಡಿತವಾಗಿಯೂ ಬೆಳ್ಳುಳ್ಳಿಯನ್ನು ತುಂಬಿಸಿಡುತ್ತೀರಿ. ಬೆಳ್ಳುಳ್ಳಿಯ ಕೆಲವು ಆರೋಗ್ಯಕರ ಪ್ರಯೋಜನಗಳು ಹೀಗಿವೆ.

**ಬ್ಯಾಕ್ಟೀರಿಯಾ ಮತ್ತು ವೈರಲ್ ಸೋಂಕುಗಳನ್ನು ದೂರವಿರಿಸಲು ಸಹಾಯ ಮಾಡುತ್ತದೆ :**

ತನ್ನಲ್ಲಿನ ಸ್ವಭಾವ ಸಹಜ ಅಂಶಗಳ ಕಾರಣದಿಂದಾಗಿ, ಬೆಳ್ಳುಳ್ಳಿಯು ಬ್ಯಾಕ್ಟೀರಿಯಾ ಮತ್ತು ವೈರಸ್ ಸೋಂಕುಗಳನ್ನು ದೂರವಿರಿಸಲು ಸಹಾಯ ಮಾಡುತ್ತದೆ. ಈ ಕೋಲಿ ಮತ್ತು ಸಾಲ್ಮೊನೆಲ್ಲಾ ಎಂಟರೈಟಿಡೀಸ್‌ನಂತಹ ಬ್ಯಾಕ್ಟೀರಿಯಾಗಳನ್ನು ನಾಶಪಡಿಸುವ ಮೂಲಕ ತಾಜಾ ಬೆಳ್ಳುಳ್ಳಿಯು ಆಹಾರದ ವಿಷವಾಗುವಿಕೆಯನ್ನು ತಡೆಯುತ್ತದೆ.

ಚರ್ಮದ ಸೋಂಕುಗಳಿಗೆ ಚಿಕಿತ್ಸೆ ನೀಡಲು ಸಹಾಯ ಮಾಡುತ್ತದೆ ಬೆಳ್ಳುಳ್ಳಿಗೆ ಬ್ಯಾಕ್ಟೀರಿಯ ನಿರೋಧಕ, ವೈರಸ್ ನಿರೋಧಕ ಎಂಬ ಎರಡೂ ಗುಣಲಕ್ಷಣಗಳು ಇರುವ ಕಾರಣ, ಚರ್ಮದ ಸೋಂಕುಗಳಿಗೆ ಚಿಕಿತ್ಸೆ ನೀಡುವಲ್ಲಿ ಬೆಳ್ಳುಳ್ಳಿಯ ಪಾತ್ರ ದೊಡ್ಡದು. ಹುಳಕಡ್ಡಿ ಮತ್ತು ಅಥ್ಲೀಟ್ಸ್ ಫೂಟ್‌ನಂತಹ ಫಂಗಲ್ ಕಾರಣದ ಚರ್ಮ ವ್ಯಾಧಿಗಳಿಗೆ ಚಿಕಿತ್ಸೆ ನೀಡುವಲ್ಲಿ ಬೆಳ್ಳುಳ್ಳಿ ವಿಶೇಷವಾಗಿ ಪರಿಣಾಮಕಾರಿಯಾಗಿರುತ್ತದೆ.

ಶರೀರದಲ್ಲಿ ರಕ್ತ ಹೆಪ್ಪು ಗಟ್ಟುವುದನ್ನು ತಡೆಯುತ್ತದೆ : ರಕ್ತವನ್ನು ಹೆಪ್ಪು ಗಟ್ಟಿಸುವ ಅಜೋನ ಎಂಬ ನಿರೋಧಕ ಅಂಶವು ಬೆಳ್ಳುಳ್ಳಿಯಲ್ಲಿದ್ದು, ಇದು ರಕ್ತವು ಹೆಪ್ಪುಗಟ್ಟುವುದನ್ನು ತಡೆಯುತ್ತವೆ. ಬೆಳ್ಳುಳ್ಳಿಯ ಈ ಗುಣವು ಹೃದಯದ ಕಾಯಿಲೆ, ಲಕ್ವಾ ಮತ್ತು ರಕ್ತಹೆಪ್ಪುಗಟ್ಟುವಿಕೆಯ ಇನ್ನಿತರ ತೊಂದರೆ ಇರುವವರಿಗೆ ಬಹಳ ಪ್ರಯೋಜನಕಾರಿ ಎನಿಸಿದೆ.

ನಿಮ್ಮ ರಕ್ತದೊತ್ತಡ ಮಟ್ಟಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಬೆಳ್ಳುಳ್ಳಿಯಲ್ಲಿರುವ ಅಲ್ಲಿಸಿನ್ ಎಂಬ ಅಂಶವು

ನನ್ನ ಕೊಂಬನ್ನು ಕಾಡುಕೋಣದ ಕೊಂಬಿನಂತೆ ಎತ್ತಿದ್ದೀ.
ಚೈತನ್ಯ ತೈಲದಿಂದ ನನ್ನನ್ನು ಅಭಿಷೇಕಿಸಿದ್ದೀ (ಕೀರ್ತ. 92:10).

ಆಂಜಿಯೋಟೆನ್‌ಸಿನ್ ಐಐ (ರಕ್ತದೊತ್ತಡ ಹೆಚ್ಚಳಕ್ಕೆ ಕಾರಣವಾಗುವ ಒಂದು ಪ್ರೋಟೀನ್)ನ ಚಟುವಟಿಕೆಯನ್ನು ತಡೆಯುತ್ತದೆ ಮತ್ತು ರಕ್ತದ ಒತ್ತಡವನ್ನು ತಗ್ಗಿಸಲು ಸಹಾಯಮಾಡುತ್ತದೆ.

**ನಿಮ್ಮ ಹೃದಯವನ್ನು ಕಾಪಾಡಲು ಸಹಾಯ ಮಾಡುತ್ತದೆ ?**

ನಿಮ್ಮ ಹೃದಯ ರಕ್ತನಾಳಗಳ ಅವಶ್ಯಕತೆಯನ್ನು ಪೂರೈಸುವ ಮೂಲಕ ಬೆಳ್ಳುಳ್ಳಿಯು ಹೃದಯಾಘಾತವನ್ನು ದೂರವಿರಿಸಲು ಸಹಾಯ ಮಾಡುತ್ತದೆ. ಬೆಳ್ಳುಳ್ಳಿಯು ರಕ್ತದ ಒತ್ತಡವನ್ನು ತಗ್ಗಿಸಲು ವಿಶೇಷವಾಗಿ ಸಹಾಯಮಾಡುತ್ತದೆ. ಕೆಟ್ಟ ಕೊಲೆಸ್ಟ್ರಾಲ್ ಅನ್ನು ತಗ್ಗಿಸುತ್ತದೆ, ಒಳ್ಳೆಯ ಕೊಲೆಸ್ಟ್ರಾಲ್ ಅನ್ನು ಹೆಚ್ಚಿಸುತ್ತದೆ, ರಕ್ತನಾಳದ ಗೋಡೆಗಳಲ್ಲಿ ನೈಟ್ರಿಕ್ ಆಕ್ಸೆಡ್ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ನೈಟ್ರಿಕ್ ಆಕ್ಸೆಡ್ ಅನ್ನುವುದು ರಕ್ತನಾಳಗಳಿಗೆ ವಿರಮಿಸಲು ಅವಕಾಶ ಮಾಡಿಕೊಡುವ ಮತ್ತು ರಕ್ತ ಹೆಪ್ಪುಗಟ್ಟುವಿಕೆಯನ್ನು ನಿವಾರಿಸುವ ಫೈಬ್ರಿನಾಲಿಸಿಸ್ ಪ್ರಕ್ರಿಯೆಗೆ ಸಹಾಯ ಮಾಡುತ್ತದೆ. ಬೆಳ್ಳುಳ್ಳಿಯ ಈ ಎಲ್ಲ ಪ್ರಯೋಜನಕಾರಿ ಅಂಶಗಳು ಅಥೆರೋಸ್ಕಿ ಸೆರಾಸಿಸ್ ಅನ್ನು ತಡೆಯಲು ಸಹಾಯ ಮಾಡುತ್ತವೆ ಮತ್ತು ಈ ಮೂಲಕ ಹೃದಯಾಘಾತ ಹಾಗೂ ಲಕ್ವಾದ ಅಪಾಯವನ್ನು ತಡೆಯುತ್ತವೆ.

ಅಲರ್ಜಿಯನ್ನು ಹೊಡೆದೊಡಿಸುತ್ತದೆ, ಶ್ವಾಸನಾಳದ ಅಲರ್ಜಿಯ ಉರಿಯೂತವನ್ನು (ಅಲರ್ಜಿ ರಿನಿಟೀಸ್) ಸುಧಾರಿಸುವ ಗುಣವು ಬೆಳ್ಳುಳ್ಳಿಗಿದೆ.

ಆಗಾಗ ನೆಗಡಿ ಮತ್ತು ಗಂಟಲು ನೋವಾಗುವುದರ ವಿರುದ್ಧ ರಕ್ಷಣೆಯನ್ನು ಒದಗಿಸುತ್ತದೆ, ನಿತ್ಯವೂ ಬೆಳ್ಳುಳ್ಳಿಯನ್ನು ಸೇವಿಸುವುದರಿಂದ ಆಗಾಗ ಶೀತ, ನೆಗಡಿ ಬಾಧೆಯ ವಿರುದ್ಧ ರಕ್ಷಣೆಯನ್ನು ಪಡೆಯುಬಹುದು. ಇದರ ಆಂಟಿ ಬ್ಯಾಕ್ಟೀರಿಯಲ್ ಲಕ್ಷಣವು ಗಂಟಲಿನ ಕಿರಿಕಿರಿಯ ವಿರುದ್ಧ ಹೋರಾಡುತ್ತದೆ. ಮೇಲಿನ ಶ್ವಾಸಂಗವ್ಯೂಹದ ಸೋಂಕುಗಳ ತೀವ್ರತೆಯನ್ನು ಬೆಳ್ಳುಳ್ಳಿಯು ತಗ್ಗಿಸುತ್ತದೆ. ಬೆಳ್ಳುಳ್ಳಿಯ ಕಫ ನಿವಾರಣಾ ಗುಣಕ್ಕಾಗಿ ಶ್ವಾಸಾಂಗವ್ಯೂಹದ ದೀರ್ಘಕಾಲಿಕ ಉರಿಯೂತದ ಉಪಚಾರದಲ್ಲಿ ಇದು ಅಪ್ರತಿಮೆ ಎನಿಸಿದೆ.

ನಿಮ್ಮ ರಕ್ತದ ಸಕ್ಕರೆಯ ಮಟ್ಟವನ್ನು ನಿಯಂತ್ರಣದಲ್ಲಿ ಇರಿಸಲು ಸಹಾಯ ಮಾಡುತ್ತದೆ ಒಂದು ವೇಳೆ ನೀವು ಮಧುಮೇಹ ರೋಗಿ ಆಗಿದ್ದರೆ, ಬೆಳ್ಳುಳ್ಳಿಯು ಇನ್ಸುಲಿನ್ ಸ್ರಾವವನ್ನು ಹೆಚ್ಚಿಸುತ್ತದೆ ಮತ್ತು ನಿಮ್ಮ ಶರೀರದ ರಕ್ತದಲ್ಲಿನ ಸಕ್ಕರೆ ಅಂಶವನ್ನು ಸಮರ್ಪಕವಾಗಿ ಇರಿಸುತ್ತದೆ.

ಕ್ಯಾನ್ಸರ್ ಅನ್ನು ದೂರವಿರಿಸಲು ಸಹಾಯ ಮಾಡುತ್ತದೆ. ಬೆಳ್ಳುಳ್ಳಿಯು ಕ್ಯಾನ್ಸರ್ ನಿರೋಧಕ ಲಕ್ಷಣಗಳಿಗೆ ಬಹಳ ಮುಖ್ಯ ಕಾರಣ ಅದರಲ್ಲಿರುವ ಅಲ್ಲೀಲ್ ಸಲ್ಫೆಡ್‌ಗಳು ಕಬ್ಬಿಣದ ಅಂಶದ ಕೊರತೆ ಮತ್ತು ರಕ್ತಹೀನತೆಯನ್ನು ಹೋಗಲಾಡಿಸಲು ಸಹಾಯಮಾಡುತ್ತದೆ. ಬೆಳ್ಳುಳ್ಳಿಯಲ್ಲಿ ಇರುವ ಡ್ಯಾಲಿಲ್ ಸಲ್ಫೆಡ್ ಎಂಬ ಅಂಶವು ಫೆರೊಹಟ್ರೋಪಿನ್ ಅಂಶದ ಉತ್ಪಾದನೆಯನ್ನು ಹೆಚ್ಚಿಸುತ್ತದೆ (ಕಬ್ಬಿಣದ ಅಂಶದ ಹೀರುವಿಕೆ ಮತ್ತು ಬಿಡುಗಡೆಯನ್ನು ಉತ್ತೇಜಿಸುವ ಒಂದು ಅಂಶ) ಮತ್ತು ಕಬ್ಬಿಣದ ಅಂಶದ ಚಯಾಪಚಯವನ್ನು ಉತ್ತಮಪಡಿಸುತ್ತದೆ ಈ ಎಲ್ಲ ಪ್ರಕ್ರಿಯೆಗಳು ಕಬ್ಬಿಣದ ಅಂಶದ ಕೊರತೆಯನ್ನು ನೀಗಿಸಲು ಸಹಾಯ ಮಾಡುತ್ತವೆ ಮತ್ತು ಈ ಮೂಲಕ ಅನೀಮಿಯಾ ಅಥವಾ ರಕ್ತಹೀನತೆಯ ತೊಂದರೆಯನ್ನು ನಿವಾರಿಸಲು ಸಹಾಯಮಾಡುತ್ತವೆ.

ದೇಹದ ತೂಕವನ್ನು ತಗ್ಗಿಸಲು ಸಹಾಯ ಮಾಡುತ್ತದೆ ನಮ್ಮ ದೇಹದಲ್ಲಿ ಪ್ರಿ–ಅಡಿಪೋಸೈಟ್‌ಗಳು ಪರಿವರ್ತನೆಗೊಂಡು ಕೊಬ್ಬಿನ ಕೋಶಗಳಾಗಿ (ಅಡಿಪೋಸೈಟ್‌ಗಳು) ಉತ್ಪತ್ತಿಯಾಗುವುದನ್ನು ನಿಯಂತ್ರಿಸಲು ಬೆಳ್ಳುಳ್ಳಿಯು ಸಹಾಯ ಮಾಡುತ್ತದೆ. ಈ ಪರಿವರ್ತನೆಯ ಪ್ರಕ್ರಿಯೆಯನ್ನು ತಡೆದು ದೇಹದ ತೂಕವನ್ನು ನಿಯಂತ್ರಿಸುತ್ತದೆ.

**ಸಲಹೆಗಳು :**

1. ಆರೋಗ್ಯ ಶಾಲಿಯಾಗಿ ಇರಲು, ನಿತ್ಯವೂ ಖಾಲಿ ಹೊಟ್ಟೆಯಲ್ಲಿ ಒಂದು ಎಸಳು ಜಜ್ಜಿದ ಬೆಳ್ಳುಳ್ಳಿಯನ್ನು ಸೇವಿಸಿ.
2. ನಿಮಗೆ ಇರುವ ರಕ್ತದೊತ್ತಡದ ಸಮಸ್ಯೆಯನ್ನು ತಗ್ಗಿಸಲು ಸಹಾಯವಾಗಲು, ನಿಮ್ಮ ನಿತ್ಯದ ಊಟದಲ್ಲಿ ಬೆಳ್ಳುಳ್ಳಿಯನ್ನು ಸಹ ಸೇರಿಸಿಕೊಳ್ಳಿ.
3. ನಿಮಗೆ ಸಾಕಷ್ಟು ಮಟ್ಟಿನ ಆರೋಗ್ಯ ಪ್ರಯೋಜನವನ್ನು ಒದಗಿಸಬೇಕಾದರೆ ಬೆಳ್ಳುಳ್ಳಿಯುನ್ನು ತಾಜಾವಾಗಿ ಉಪಯೋಗಿಸಬೇಕು.
4. ಕ್ಯಾಟಲೈಸಿಸ್ ಪ್ರಕ್ರಿಯೆಯ ಮೂಲಕ ಅಲ್ಲಿಸಿನ್ ಉತ್ಪತ್ತಿಯಾಗುವುದನ್ನು ಉತ್ತೇಜಿಸಲು, ಬೆಳ್ಳುಳ್ಳಿಯನ್ನು ನುಂಗುವುದಕ್ಕೆ ಮೊದಲು ಚಮಚೆಯಿಂದ ಸ್ವಲ್ಪ ಜಜ್ಜಿಕೊಳ್ಳಿ

ನನ್ನ ಮನವೇ, ಚುರುಕಾಗು; ಸ್ವರ ಮಂಡಲವೇ, ಕಿನ್ನರಿಯೇ ಎಚ್ಚರವಾಗಿರಿ. ಸಂಕೀರ್ತನೆಯಿಂದ ಉದಯವನ್ನು ಮುಂಗೊಳ್ಳುವೆನು (ಕೀರ್ತ. 57:8).

ನಂತರ ಸೇವಿಸಿ.

ಹದ ಪ್ರಮಾಣದಲ್ಲಿ ಬೆಳ್ಳುಳ್ಳಿಯನ್ನು ಸೇವಿಸಿ

ಪ್ರತಿದಿನ 2 ರಿಂದ 4 ಗ್ರಾಂ ತಾಜಾ ಹಾಗೂ ಜಜ್ಜಿದ ಬೆಳ್ಳುಳ್ಳಿಯನ್ನು ಸೇವಿಸಬಹುದು. ಆದರೆ ಹೆಚ್ಚು ಬೆಳ್ಳುಳ್ಳಿಯನ್ನು ಸೇವಿಸಿದರೆ ಅದು ಚರ್ಮ ಮತ್ತು ಉಸಿರಿನ ಮೂಲಕ ಒಂದು ವಿಶಿಷ್ಟ ವಾಸನೆಯನ್ನು ಹೊರಡಿಸುತ್ತದೆ, ಮಾತ್ರವಲ್ಲದೆ ಇದರಿಂದಾಗಿ ಎದೆ ಉರಿ, ಹೊಟ್ಟೆಕೆಡುವುದು ಮತ್ತು ಅಲರ್ಜಿ ಪ್ರತಿಕ್ರಿಯೆಗಳು ಕಾಣಿಸಿಕೊಳ್ಳಬಹುದು.

**ಬೆಳ್ಳುಳ್ಳಿಯನ್ನು ಅಡುಗೆಯಲ್ಲಿ ಉಪಯೋಗಿಸುವುದು ಹೇಗೆ ?**

ನೀವು ಬೆಳ್ಳುಳ್ಳಿಯನ್ನು ಸರಿಯಾದ ವಿಧಾನದಲ್ಲಿ ಅಡುಗೆಗೆ ಬಳಸುವುದು ಬಹಳ ಅವಶ್ಯಕ. ಬೆಳ್ಳುಳ್ಳಿಯನ್ನು ಅಸಮರ್ಪಕ ವಿಧಾನದಲ್ಲಿ ಉಪಯೋಗಿಸಿದರೆ ಅಥವಾ ಸೇವಿಸಿದರೆ ಅದರಿಂದ ವಿರುದ್ಧ ಪರಿಣಾಮಗಳು ಉಂಟಾಗಬಹುದು. ಮನೆಯಲ್ಲಿ ಅಡುಗೆ ಮಾಡುವಾಗ, ಹೆಚ್ಚಿನ ಸಂದರ್ಭಗಳಲ್ಲಿ ಬೆಳ್ಳುಳ್ಳಿಯನ್ನು ಜಜ್ಜಿದ ಅಥವಾ ಕತ್ತರಿಸಿದ ಕೂಡಲೇ ಅದನ್ನು ಅಡುಗೆಗೆ ಬಳಸುತ್ತಾರೆ, ಇಲ್ಲಿ ಬೆಳ್ಳುಳ್ಳಿಯಲ್ಲಿನ ಆರೋಗ್ಯಕರ ಅಂಶಗಳನ್ನು ವರ್ಧಿಸುವಂತಹ ಕಿಣ್ವಗಳ ಪ್ರತಿಕ್ರಿಯೆಗೆ ಸಾಕಷ್ಟು ಸಮಯವೇ ದೊರಕುವುದಿಲ್ಲ.

ಹಾಗೆ ಮಾಡದೆ ಬೆಳ್ಳುಳ್ಳಿಯನ್ನು ಜಜ್ಜಿ ಕೋಣೆಯ ತಾಪಮಾನದಲ್ಲಿ 15 ನಿಮಿಷ ಸೆಟ್ ಆಗಲು ಬಿಡಿ. ಇಷ್ಟು ಮಾತ್ರ ಅಲ್ಲದೆ ಬೆಳ್ಳುಳ್ಳಿಯನ್ನು ಯಾವತ್ತೂ ಅಧಿಕ ಶಾಖದಲ್ಲಿ ಬೇಯಿಸಬಾರದು ಬೆಳ್ಳುಳ್ಳಿಯನ್ನು ಅದಷ್ಟು ಹಸಿಯಾಗಿ ತಿನ್ನಲು ಅಥವಾ ಕಡಿಮೆ ಶಾಖದಲ್ಲಿ ಬೇಯಿಸಿ ತಿನ್ನಲು ಪ್ರಯತ್ನಿಸಿ. ಬ್ಯಾಕ್ಟೀರಿಯಾಗಳನ್ನು ನಾಶಪಡಿಸಲು ಹಸಿ ಬೆಳ್ಳುಳ್ಳಿಯನ್ನು ಉಪಯೋಗಿಸುತ್ತಾರೆ. ಆದರೆ ಬೇಯಿಸಿದ ಬೆಳ್ಳುಳ್ಳಿಗೆ ರಕ್ತದೊತ್ತಡ ಮತ್ತು ಕೊಲೆಸ್ಟ್ರಾಲ್ ಅನ್ನು ತಗ್ಗಿಸುವ ಸಾಮರ್ಥ್ಯ ಹೆಚ್ಚು ಇದೆ. ಬೆಳ್ಳುಳ್ಳಿಯ ಉತ್ತಮ ಗುಣಗಳನ್ನು ಪಡೆಯಲು ಇರುವ ಅತ್ಯುತ್ತಮ ವಿಧಾನ ಅಂದರೆ ಬೆಳ್ಳುಳ್ಳಿಯನ್ನು ಹಸಿಯಾಗಿ ಅಥವಾ ಅರೆಹಸಿಯಾಗಿ ತಿನ್ನುವುದು. ಇದನ್ನು ನೀವು ಊಟದ ಜತೆ ಸೇವಿಸಲು ಬಯಸುವುದಾದರೆ, ಅಡುಗೆ ಪಾತ್ರೆಯನ್ನು ಒಲೆಯಿಂದ ಇಳಿಸಿದ ಅನಂತರ ಬೆಳ್ಳುಳ್ಳಿಯನ್ನು ಸೇರಿಸಿ. ಬೆಳ್ಳುಳ್ಳಿಯು ಅನೇಕರಲ್ಲಿ ಅತ್ಯುತ್ತಮ ಆರೋಗ್ಯಕರ ಪ್ರಭಾವವನ್ನು ಬೀರುತ್ತದೆ ಎಂಬ ಕಾರಣಕ್ಕಾಗಿ, ಸಂತುಲಿತ ಆಹಾರ ಮತ್ತು ಸೂಕ್ತ ವ್ಯಾಯಾಮವನ್ನು ಬಿಟ್ಟು ಬಿಡುವಂತಿಲ್ಲ.

ಜೀವನ ಶೈಲಿಗೆ ಬೆಳ್ಳುಳ್ಳಿ ಉಪಚಾರ ಎನ್ನುವುದು ಬದಲಿ ಅಲ್ಲ, ಬೆಳ್ಳುಳ್ಳಿ ಸೇವನೆಯು ಆರೋಗ್ಯಕರ ಜೀವನ ಶೈಲಿಯ ಒಂದು ಭಾಗವಾಗಿ ಇರಬೇಕೇ ಹೊರತು ಅದಕ್ಕೆ ಬದಲಿಯಾಗಿ ಅಲ್ಲ.

ಸಂಗ್ರಹ.

## ಡಿಜಿಎಮ್ ಬೇತೇಲ್ ಅಂಕಣ

- **ಆಗಸ್ಟ್ 17 ರಿಂದ 26ರವರೆಗೆ 11ನೇ ಕೆರೀತ್ ಕೂಟವು ನಡೆಸಲ್ಪಡುವದು.**
- **ಕರ್ತನ ಕೃಪೆಯಿಂದ ವಿಶ್ವಾಸದಮನೆಯಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ ವಿಕಾಸ್ ಕುಮಾರ್‌ರವರು ತಮ್ಮ ಊರಾದ ಬಿಹಾರ್‌ಕ್ಕೆ ಮರಳಿದ್ದಾರೆ.**
- **ಕರ್ತನ ಕೃಪೆಯಿಂದ ವಿಶ್ವಾಸದಮನೆಯಲ್ಲಿ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ 12 ಮಂದಿ ತಮ್ಮ ತಮ್ಮ ಕುಟುಂಬವನ್ನು ಸೇರುತ್ತಿದ್ದಾರೆ.**

ಪ್ರಭಾವ ಹೊಂದುವದಕ್ಕೆ ತಾನು ಮುಂದಾಗಿ ಸಿದ್ಧಮಾಡಿದ ಕರುಣಾಪಾತ್ರದಲ್ಲಿ
ತನ್ನ ಮಹಿಮಾತಿಶಯವನ್ನು ತೋರ್ಪಡಿಸಿದ್ದಾನೆ (ರೋಮ. 9:23).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 0091 9902334941**

---

## ನಿಮ್ಮಗೆಲ್ಲಾ ಸಂತಸ ಸುದ್ಧಿ

# VOICE OF GOD
## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

---

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0091 9902334941, 0091 8202002781, 0091 9964070654**

ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ, ಪ್ರತ್ಯಕ್ಷರಾಗುವಿರಿ (ಕೊಲೊ. 3:4).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ತ್ರಯೇಕತ್ವವನ್ನು ನಾವು ಹಳೆ ಒಡಂಬಡಿಕೆಯಲ್ಲಿ ಕಾಣಲು ಸಾಧ್ಯ. ಹಳೆಯ ಒಡಂಬಡಿಕೆಯ ಅನೇಕ ಭಾಗಗಳಲ್ಲಿ ದೇವರು ತನ್ನನ್ನು ಸಂಬೋಧಿಸಿಕೊಳ್ಳುವಾಗ ನಾವು ನಮ್ಮ, ನಮಗಾಗಿ ಎಂಬ ಪುರುಷಾರ್ಥಕ ಬಹುವಚನ ಸರ್ವನಾಮಗಳನ್ನು ಉಪಯೋಗಿಸಿರುವನು. ಸತ್ಯವೇದದಲ್ಲಿ ಈ ರೀತಿಯ ಅನೇಕ ಉದಾಹರಣೆಗಳನ್ನು ನಾವು ಕಾಣಬಹುದು. ಆದಿ. 1:26 ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟು ಮಾಡೋಣ. ಇಲ್ಲಿ ದೇವರು ತನ್ನ ಕುರಿತು ಮಾತನಾಡುವಾಗ ನಮ್ಮ, ಮಾಡೋಣ ಎಂಬ ಬಹುವಚನವನ್ನು ಉಪಯೋಗಿಸುವುದನ್ನು ನೋಡಬಹುದು. ಇದರಿಂದ ಒಂದಕ್ಕಿಂತ ಹೆಚ್ಚಾದ ದೇವರ ವ್ಯಕ್ತಿತ್ವವನ್ನು ಇಲ್ಲಿ ಗುರುತಿಸಬಹುದಾಗಿದೆ. ಯಾಕಂದರೆ ನಾವು, ನಮ್ಮ ಎಂಬ ಸಂಬೋಧನೆಯೂ ಮಾತನಾಡುವಾತನು ಯಾರನ್ನು ಸಂಬೋಧಿಸುತ್ತಾನೋ ಆ ವ್ಯಕ್ತಿಯು ಒಂದೇ ಅಂತಸ್ಥಿನವರೆಂಬುದನ್ನು ದೃಢಪಡಿಸುವುದು. ಆದಕಾರಣ ಪುರುಷಾರ್ಥಕ ಬಹುವಚನ ಸರ್ವನಾಮಗಳು ಇತರ ವಾಕ್ಯಗಳ ಸಂದರ್ಭದಲ್ಲಿ ನೋಡಿದರೆ ಅದು ದೇವರ ಮೂರು ವ್ಯಕ್ತಿತ್ವದಲ್ಲಿದ್ದ ಅನ್ಯೋನ್ಯತೆಯನ್ನು ಸೂಚಿಸುವುದಾಗಿದೆ. ಆದಿ. 3:22 ರಲ್ಲಿ ಈ ಮನುಷ್ಯನು ಒಳ್ಳೇದರ ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ ಅಂದನು. ನಮ್ಮಲ್ಲಿ ಒಬ್ಬನಂತಾದನಲ್ಲಾ ಎಂದು ಹೇಳುವಾಗ ಒಂದಕ್ಕಿಂತ ಹೆಚ್ಚಾದ ಅಸ್ಥಿತ್ವದ ಕುರಿತು ಇಲ್ಲಿ ದೇವರು ಸ್ಪಷ್ಟವಾಗಿ ಮಾತನಾಡುವುದನ್ನು ಗಮನಿಸಬಹುದು. "ನಾವು ಇಳಿದು ಇವರಲ್ಲಿ ಒಬ್ಬರ ಮಾತು ಒಬ್ಬರಿಗೆ ತಿಳಿಯದಂತೆ ಇವರ ಭಾಷೆಯನ್ನು ತಾರುಮಾರು ಮಾಡೋಣ" (ಆದಿ. 11:7). ಇಲ್ಲಿ ಕೂಡ ದೇವರು ಬಹುವಚನವನ್ನು ಉಪಯೋಗಿಸುವುದನ್ನು ಕಾಣಬಹುದು. "ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು" (ಯೆಶಾ. 6:8). ಇಲ್ಲಿ ಕೂಡ ದೇವರು ತನ್ನ ಕುರಿತು ಮಾತನಾಡುವಾಗ ಬಹುವಚನವನ್ನು ಉಪಯೋಗಿಸುವುದನ್ನು ಕಾಣಬಹುದು.

ಸೈತಾನನಿಗೆ ಕ್ರೈಸ್ತ ವಿಶ್ವಾಸದ ಮೂಲವಾದ ತ್ರೈಯೇಕತ್ವದ ಬೋಧನೆಯನ್ನು ಎದುರಿಸದ ಹೊರತು ಅವನಿಗೆ ಸಮಾಧಾನವನ್ನು ಕಾಣಲು ಸಾಧ್ಯವಿಲ್ಲ. ಹೊಸ ಒಡಂಬಡಿಕೆಯಲ್ಲೂ ಕೂಡ ಸ್ಪಷ್ಟವಾದ ದೇವರ ತ್ರೈಯೇಕತ್ವವನ್ನು ಅಂದರೆ ಒಬ್ಬನೇ ದೇವರ ಮೂರು ಪ್ರತ್ಯೇಕವಾದ ವ್ಯಕ್ತಿತ್ವಗಳನ್ನು ನಾವು ಕಾಣಲು ಸಾಧ್ಯ. ಲೂಕ. 3:21–22 ರಲ್ಲಿ ಜನರೆಲ್ಲಾ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಯೇಸು ಸಹ ಸ್ನಾನ ಮಾಡಿಸಿಕೊಂಡು ಪ್ರಾರ್ಥನೆ ಮಾಡುತ್ತಿರುವಲ್ಲಿ ಆಕಾಶವು ತೆರೆಯಿತು; ಮತ್ತು ಪವಿತ್ರಾತ್ಮನು ದೇಹಾಕಾರವಾಗಿ ಪರಿವಾಳದ ಹಾಗೆ ಆತನ ಮೇಲೆ ಇಳಿದನು. ಆಗ ನೀನು ಪ್ರಿಯನಾಗಿರುವ ನನ್ನ ಮಗನು, ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು.

ನರಾವತಾರ ಎತ್ತಿದ ಕರ್ತನಾದ ಯೇಸುಕ್ರಿಸ್ತನು ಇಲ್ಲಿ ದೀಕ್ಷಾಸ್ನಾನ ಮಾಡುವಂಥದ್ದನ್ನು ಕಾಣುತ್ತೇವೆ (ತ್ರಯೇಕತ್ವದ ದ್ವಿತಿಯ ವ್ಯಕ್ತಿ) ತಂದೆಯಾದ ದೇವರು ಆಕಾಶದಿಂದ ಮಾತನಾಡಿದನು (ತ್ರ ಯೇಕತ್ವದ ಪ್ರಥಮ ವ್ಯಕ್ತಿ) ಪರಿಶುದ್ಧಾತ್ಮನು ಪಾರಿವಾಳದ ರೂಪದಲ್ಲಿ ಕರ್ತನಾದ ಯೇಸುಕ್ರಿಸ್ತನ ಮೇಲೆ ಇಳಿದು ಬಂದನು (ತ್ರ ಯೇಕತ್ವದ ತೃತೀಯ ವ್ಯಕ್ತಿ) ಇಲ್ಲಿ ದೇವರನ್ನು, ತ್ರಯೇಕತ್ವದ ಪ್ರತ್ಯೇಕವಾದ ಮೂರು ವ್ಯಕ್ತಿತ್ವಗಳನ್ನು ನಾವು ಕಾಣಬಹುದು.

ಕರ್ತನಾದ ಯೇಸುಕ್ರಿಸ್ತನು ತಾನು ದೇವರೆಂದು, ದೇವರಿಗೆ ಸರಿಸಮಾನನು ತಂದೆ ದೇವರೊಂದಿಗೆ ಒಂದೇ ಆಗಿರುವಾತನು ಆಗಿದ್ದಾನೆಂಬುದನ್ನು ಬೋಧಿಸಿದನು ಮಾತ್ರವಲ್ಲದೆ ತಂದೆ ದೇವರಿಂದ ತಾನು ಬೇರೆಯಾಗಿದ್ದಾನೆಂಬುದನ್ನು ಸಹ ದೃಢಪಡಿಸಿದನು. ಕರ್ತನಾದ ಯೇಸುಕ್ರಿಸ್ತನ ಕೆಲವು ಮಾತುಗಳನ್ನು ಇಲ್ಲಿ ನಾವು ಗಮನಿಸೋಣ.

1) ನಾನು ತಿರುಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ; ಅದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ (ಯೋಹಾ. 10:17).
2) ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ (ಯೋಹಾ. 14:9).
3) ನಾನು ಒಳ್ಳೆ ಕುರುಬನು; ತಂದೆಯು ನನ್ನನ್ನು ನಾನು ತಂದೆಯನ್ನು ತಿಳಿದಿರುವಂತೆಯೇ ನಾನು ನನ್ನ ಕುರಿಗಳನ್ನು ತಿಳಿದಿದ್ದೇನೆ (ಯೋಹಾ. 10:15).
4) ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ

ಬರುವದಿಲ್ಲ (ಯೋಹಾ. 14:6).

5) ತೀರ್ಪುಮಾಡಿದರೂ ನನ್ನ ತೀರ್ಪು ಸರಿಯಾದದ್ದೇ; ಯಾಕಂದರೆ ನಾನು ಒಂಟಿಗನಲ್ಲ; ನಾನು ನನ್ನನ್ನು ಕಳುಹಿಸಿಕೊಟ್ಟ ತಂದೆಯೂ ಇಬ್ಬರು ಇದ್ದೇವೆ. (ಯೋಹಾ. 8:16).

6) "ಇದಲ್ಲದೆ ತಂದೆಯೂ ಯಾರಿಗೂ ತೀರ್ಪು ಮಾಡುವದೂ ಇಲ್ಲ; ತೀರ್ಪು ಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ; ಎಲ್ಲರು ತನಗೆ ಮಾನಕೊಡುವ ಪ್ರಕಾರವೇ ಮಗನಿಗೂ ಮಾನ ಕೊಡಬೇಕೆಂದು ತಂದೆಯು ಇಚ್ಛಿಸುತ್ತಾನೆ. ಮಗನಿಗೆ ಮಾನ ಕೊಡದವನು ಅವನನ್ನು ಕಳುಹಿಸಿದ ತಂದೆಗೂ ಮಾನ ಕೊಡದವನಾಗಿದ್ದಾನೆ" (ಯೋಹಾ. 5:22–23).

7) "ನನ್ನ ತಂದೆಯು ಎಲ್ಲವನ್ನೂ ನನಗೆ ಒಪ್ಪಿಸಿದ್ದಾನೆ. ತಂದೆಯೇ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ; ಮಗನೇ ಹೊರತು ಇನ್ನಾವನೂ ತಂದೆಯನ್ನು ತಿಳಿದವನಲ್ಲ; ಮತ್ತು ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ" (ಮತ್ತಾ. 11:27).

8) "ಯಾರಾದರೂ ನನ್ನನ್ನು ಪ್ರೀತಿಸುವನಾದರೆ ನನ್ನ ಮಾತನ್ನು ಕೈಗೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರ ಮಾಡಿಕೊಳ್ಳುವೆವು" (ಯೋಹಾ. 14:23).

9) ನಾನು ನನ್ನ ತಂದೆಯ ಹೆಸರಿನ ಮೇಲೆ ಬಂದಿದ್ದೇನೆ (ಯೋಹಾ. 5:43).

10) ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ; ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಗೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಗೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ. (ಯೋಹಾ. 15:9–10).

ನೀವು ನಿಜವಾಗಿಯೂ ಯೇಸುವಿನ ಪ್ರತಿಯೊಂದು ಮಾತುಗಳು ಸರಿಯಾದದ್ದಲ್ಲವೆಂದೂ, ಅರ್ಥಹೀನವೆಂದೂ ಹೇಳುವುದಾದರೆ ತಂದೆ ಎಂದು ಬರೆದ ಕಡೆಗಳಲ್ಲೆಲ್ಲಾ ಯೇಸು ಎಂದು ಬದಲಾಯಿಸಿ ಓದಿರಿ. ಈ ಮೇಲಿನ ವಾಕ್ಯಗಳನ್ನು ಓದಿದ ನಂತರವೂ ತಂದೆಯೂ ಮಗನೂ ಪ್ರತ್ಯೇಕ ವ್ಯಕ್ತಿಗಳಲ್ಲವೆಂದು ವಾದಿಸುವವರು ಖಂಡಿತವಾಗಿಯೂ, ಬುದ್ಧಿಹೀನರೂ, ಕುರುಡರೂ, ಮೂರ್ಖರೂ ಆಗಿದ್ದಾರೆ ಅಥವಾ ಸತ್ಯವೇದದಲ್ಲಿರುವ ಸತ್ಯವನ್ನು ಇರುವ ರೀತಿಯಲ್ಲಿ ಒಪ್ಪಿಕೊಳ್ಳಲು ಇಷ್ಟವಿಲ್ಲದವರಾಗಿದ್ದಾರೆ.

ಸತ್ಯವೇದದಲ್ಲಿ ತಂದೆಯ ಕುರಿತಾಗಿ ಕರ್ತನಾದ ಯೇಸುಕ್ರಿಸ್ತನು ಹೇಳುವಂತೆ ಪವಿತ್ರಾತ್ಮನ ಕುರಿತೂ ಹೇಳಿರುವುದನ್ನು ಗಮನಿಸೋಣ.

1) **ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು** (ಯೋಹಾ. 14:16).

1. ಮೇಲಿನ ವಚನಗಳಲ್ಲಿ ಬೇಡುವವನು ತ್ರಯೇಕತ್ವದ ದ್ವಿತಿಯ ವ್ಯಕ್ತಿ
2. ಕೇಳಿಕೊಳ್ಳುವುದು ತ್ರಯೇಕತ್ವದ ಪ್ರಥಮ ವ್ಯಕ್ತಿಯ ಬಳಿ.
3. ಸಹಾಯಕನು ತ್ರಯೇಕತ್ವದ ಮೂರನೆಯ ವ್ಯಕ್ತಿ.

2) 1. ತಂದೆಯಾದ ದೇವರು ಮಗನನ್ನು ಕಳುಹಿಸಿದನು (ಯೋಹಾ. 5:37, 3:16). ತ್ರಯೇಕತ್ವದ ಪ್ರಥಮ ವ್ಯಕ್ತಿಯಾದ ತಂದೆಯಾದ ದೇವರು ತ್ರಯೇಕತ್ವದ ದ್ವಿತಿಯ ವ್ಯಕ್ತಿಯನ್ನು ಲೋಕಕ್ಕೆ ಕಳುಹಿಸಿದನು.

2. ತ್ರಯೇಕತ್ವದ ದ್ವಿತಿಯ ವ್ಯಕ್ತಿಯಾದ ಯೇಸುಕ್ರಿಸ್ತನು ನರವತಾರವೆತ್ತಿ ಬಂದನು (ಯೋಹಾ. 1:14).
3. ತ್ರಯೇಕತ್ವದ ತೃತೀಯ ವ್ಯಕ್ತಿಯ ಮೂಲಕ ಮರಿಯಳು ಗರ್ಭ ಧರಿಸಿದಳು (ಲೂಕ. 1:35).

3) **ನಮ್ಮ ವಿಮೋಚನೆಯ ಯೋಜನೆಯ ಕುರಿತು ನೋಡುವುದಾದರೆ ತ್ರಯೇಕ ದೇವರ ಪಾತ್ರವನ್ನು ಗಮನಿಸಬಹುದು.**

1. ತಂದೆಯಾದ ದೇವರು ಮೊದಲೇ ಸಂಕಲ್ಪಿಸಿದನು (ತ್ರಯೇಕತ್ವದ ಪ್ರಥಮ ವ್ಯಕ್ತಿ) (ಎಫೆ. 1:6).
2. ತ್ರಯೇಕತ್ವದ ದ್ವಿತಿಯ ವ್ಯಕ್ತಿಯಾದ ಯೇಸುಕ್ರಿಸ್ತನು ರಕ್ತ ಸುರಿಸಿದನು (ಎಫೆ. 1:7).
3. ತ್ರಯೇಕತ್ವದ ಮೂರನೆ ವ್ಯಕ್ತಿಯಾದ ಪವಿತ್ರಾತ್ಮ ದೇವರು ಸಂಚಕಾರವಾಗಿದ್ದಾನೆ (ಎಫೆ. 1:14).

4) **ನಮ್ಮನ್ನು ಶುದ್ಧಿಮಾಡುವ ಕೆಲಸದಲ್ಲಿ ತ್ರಯೇಕ ದೇವರ ಪಾತ್ರವನ್ನು ಗಮನಿಸೋಣ.**

1. ತ್ರಯೇಕತ್ವದ ಮೊದಲನೇ ವ್ಯಕ್ತಿಯಾದ ತಂದೆಯಾದ ದೇವರು ಶುದ್ಧೀಕರಿಸುತ್ತಾನೆ (ಯೋಹಾ. 15:2).
2. ತ್ರಯೇಕತ್ವದ ದ್ವೀತಿಯ ವ್ಯಕ್ತಿಯಾದ ಮಗನಾದ ಯೇಸುಕ್ರಿಸ್ತನು ತನ್ನ ವಾಕ್ಯದ ಮೂಲಕ ಶುದ್ಧೀಕರಿಸುತ್ತಾನೆ (ಯೋಹಾ. 15:3).
3. ತ್ರಯೇಕತ್ವದ ಮೂರನೆಯ ವ್ಯಕ್ತಿಯಾಗಿರುವ ಪವಿತ್ರಾತ್ಮ ದೇವರು ಶುದ್ಧೀಕರಿಸುತ್ತಾನೆ (2 ಥೆಸ. 2:13).

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**


# ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2002781, 0091 9902334941**


# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ನಮ್ಮ ದೇವರನ್ನು ಸ್ತುತಿಸುವದು ಒಳ್ಳೇದೂ ಸಂತೋಷಕರವೂ ಆಗಿದೆ;
ಆತನನ್ನು ಕೀರ್ತಿಸುವದು ಯುಕ್ತವಾಗಿದೆ (ಕೀರ್ತ. 147:1).

# ಅಂತರ್ಯದ ಸೌಂದರ್ಯ

1) **ಶುದ್ಧ ಹೃದಯ** (ಕೀರ್ತ. 51:10) :– **"ಅಯೋಗ್ಯ ಕಾರ್ಯಗಳಲ್ಲಿ ಮನಸ್ಸಿಡದೆ ಮೋಸಪ್ರಮಾಣ ಮಾಡದೆ ಶುದ್ಧಹಸ್ತವೂ ನಿರ್ಮಲಮನಸ್ಸೂ ಉಳ್ಳವನಾಗಿದ್ದಾನೋ ಅವನೇ ದೇವರಿಂದ ಶುಭವನ್ನು ಹೊಂದುವನು; ತನ್ನ ರಕ್ಷಕನಾದ ದೇವರಿಂದ ನೀತಿಫಲವನ್ನು ಪಡೆಯುವನು. ಇಂಥವರೇ ಆತನ ದರ್ಶನವನ್ನು ಬಯಸುವವರು. ಯಾಕೋಬ್ಯರ ದೇವರೇ, ನಿನ್ನ ಸಾನಿಧ್ಯವನ್ನು ಸೇರುವವರು ಇಂಥವರೇ"** (ಕೀರ್ತ. 24:4–6).

2) **ಕ್ಷಮಿಸುವ ಹೃದಯ** (ಮತ್ತಾ. 18:35). **ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವುದಿಲ್ಲ** (ಮತ್ತಾ. 6:15).

3) **ಸರಳ ಹೃದಯ** :– (ಅ.ಕೃ. 2:46) **ದೇವರು ನಮ್ಮಲ್ಲಿ ಗರ್ವದ ಹೃದಯವನ್ನು ಎಂದಿಗೂ ಎದುರು ನೋಡುವವನಲ್ಲ, ಮೃದುವಾದ ಹೃದಯ ದಯಪಾಲಿಸುವನು** (ಯೆಹೆ. 36:26).

4) **ನಂಬಿಕೆಯ ಹೃದಯ** : (ಅ.ಕೃ. 4:32). **ಅಪನಂಬಿಕೆಯುಳ್ಳ ಕೆಟ್ಟ ಹೃದಯ ಯಾರಲ್ಲೂ ಇರಬಾರದೆಂದು ಸತ್ಯವೇದ ಹೇಳುತ್ತದೆ** (ಇಬ್ರಿ. 3:12–13).

5) **ಜ್ಞಾನದ ಹೃದಯ** :– (ಕೀರ್ತ. 90:12). ನಮಗಿರುವ ದಿನಗಳು ಕೊಂಚವೇ ಎಂದು ತಿಳಿದುಕೊಂಡರೆ ಜ್ಞಾನದ ಹೃದಯ ಹೊಂದಿಕೊಳ್ಳಲು ಸಾಧ್ಯ.

6) **ಹರ್ಷ ಹೃದಯ** (ಜ್ಞಾನೋ. 17:22). **ಕರ್ತನನ್ನು ಯಥಾರ್ಥವಾಗಿ ಆರಾಧಿಸುವವರು, ಸೇವಿಸುವವರು ಯಾವಾಗಲೂ ಹರ್ಷದ ಹೃದಯ ಹೊಂದಿಕೊಳ್ಳುವರು.**

7) **ವಾಕ್ಯಕ್ಕೆ ಭಯ ಪಡುವ ಹೃದಯ** :– (ಕೀರ್ತ. 119:161). **ನಿನ್ನ ಭಯದಿಂದ ನನ್ನ ಮಾಂಸವು ಕಂಪಿಸುತ್ತದೆ. ನಿನ್ನ ವಿಧಿಗಳಿಗೆ ಅಂಜಿಕೊಂಡಿದ್ದೇನೆ** (ಕೀರ್ತ. 119:120).

8) **ಸುನ್ನತಿಯ ಹೃದಯ** (ಧರ್ಮೋ. 10:16) **"ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ"** (ರೋಮ. 6:29). **"ಪಾಪಾಧೀನ ಸ್ವಭಾವವನ್ನು ವಿಸರ್ಜಿಸುವದೇ ಇದೇ ಕ್ರಿಸ್ತೀಯ ಸುನ್ನತಿ** (ಕೊಲೊ. 2:11).

9) **ಪ್ರೀತಿಸುವ ಹೃದಯ** :– (ಧರ್ಮೋ. 6:5) ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿ ರಸವು ನಮ್ಮ ಹೃದಯಗಳಲ್ಲಿ ಧಾರಳವಾಗಿ ಸುರಿದಿದೆ (ರೋಮ. 5:5).

10) **ಧೈರ್ಯದ ಹೃದಯ** (ಕೀರ್ತ. 10:17) ದೇವರನ್ನು ನಿರೀಕ್ಷಿಸಿ ದೃಢವಾಗಿರು, ನಿನ್ನ ಹೃದಯ ಧೈರ್ಯದಿಂದಿರಲಿ (ಕೀರ್ತ. 27:14).

11) **ಆತನಲ್ಲಿ ನೆಲೆಗೊಂಡ ಹೃದಯ** (ಕೀರ್ತ. 78:37).

12) ಪ್ರಾರ್ಥಿಸುವ ಹೃದಯ (1 ಸಮು. 1:13).

13) ಭಯಭಕ್ತಿಯುಳ್ಳ ಹೃದಯ (ಯೆರೆ. 32:40).

14) ಪಶ್ಚಾತ್ತಾಪದ ಹೃದಯ (ಯೋವೆ. 2:13).

15) ಸಮಾಧಾನದ ಹೃದಯ (ಕೊಲೊ. 3:15).

16) ಪವಿತ್ರಾತ್ಮದಿಂದ ತುಂಬಿರುವ ಹೃದಯ (2 ಕೊರಿ. 1:22).

**ವಯಸ್ಕರ ಸ್ವರ**

17) ಕರ್ತನನ್ನು ಆರಾಧಿಸುವ ಹೃದಯ (ಎಫೆ. 5:19).

18) ದೇವ ಜನರನ್ನು ಸ್ವೀಕರಿಸುವ ಹೃದಯ (2 ಕೊರಿ. 7:2).

ನಿಮ್ಮ ವಿಷಯುದಲ್ಲಿ ನಮ್ಮ ಹೃದಯುವು ವಿಶಾಲವಾಗಿರುವುದರಿಂದ ನಮ್ಮ ವಿಷಯದಲ್ಲಿ ನಿಮ್ಮ ಹೃದಯವನ್ನು ವಿಶಾಲ ಮಾಡಿಕೊಳ್ಳಿರಿ (2 ಕೊರಿ. 6:13).

1) **ಆಂತರ್ಯದಲ್ಲಿ ವಿಶೇಷ ಬಲವನ್ನು ಹೊಂದುವುದು** (ಎಫೆ. 3:16). ಕೆಲವರು ದೇವ ಮಕ್ಕಳೆಂದು ಕರೆಯಲ್ಪಡುವವರು ದೇಹದಲ್ಲಿ ತುಂಬಾ ಬಲವುಳ್ಳವರಾಗಿದ್ದರೂ ಆತ್ಮೀಕ ಜೀವಿತದಲ್ಲಿ ತುಂಬಾ ಬಲಹೀನರಾಗಿರುವರು. ದಿನಕ್ಕೊಂದು ಗಂಟೆಯಾದರೂ ಪ್ರಾರ್ಥಿಸಲಾಗದೆ, ಸತ್ಯವೇದ ಓದಲಾಗದೆ, ಉಪವಾಸ ಮಾಡಲಾಗದೆ ತುಂಬಾ ಸೋತು ಆಂತರ್ಯದಲ್ಲಿ ಬಲಹೀನರಾಗಿರುತ್ತಾರೆ. ನೀವು ಕರ್ತನನ್ನು ಆತನ ಅತ್ಯಧಿಕ ಶಕ್ತಿಯನ್ನು ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ (ಎಫೆ. 6:10) ಆತ್ಮದಲ್ಲಿ ಬಲಹೊಂದಿದವರಾಗಿ ಕರ್ತನಿಗಾಗಿ ಪ್ರಕಾಶಿಸಬೇಕಾಗಿದೆ. "ಆತನ ಮಹಿಮ ಶಕ್ತಿಯ ಪ್ರಕಾರ ಪರಿಪೂರ್ಣ ಬಲಹೊಂದಿ ಬಲಿಷ್ಠರಾಗಿ (ಕೊಲೊ. 1:11). ಪವಿತ್ರಾತ್ಮನ ಮೂಲಕ ಈ ವಿಶೇಷ ಬಲ ಆಂತರ್ಯದಲ್ಲಿ ನಾವು ಹೊಂದಿದವರಾಗುವೆವು.

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

ಆತನ ಪ್ರಭಾವವು ಭೂಮ್ಯಾಕಾಶಗಳಲ್ಲಿ ಮರೆಯತ್ತದೆ. ಆತನು ತನ್ನ ಪ್ರಜೆಗೋಸ್ಕರ [ಘನದ] ಕೊಂಬನ್ನು ಎಬ್ಬಿಸಿದ್ದಾನೆ (ಕೀರ್ತ. 148:14).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟ್ರರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091-820 2589070, 0091-820 200 2781
E-mial: dgmofficial@gmail.com

ಯೆಹೋವನು ತನ್ನ ಪ್ರಜೆಗೆ ಪ್ರಸನ್ನನಾದನು; ದೀನರನ್ನು ರಕ್ಷಣೆಯಿಂದ ಭೂಷಿಸುತ್ತಾನೆ (ಕೀರ್ತ. 149:4).

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **ನಾಯಕತ್ವವು ಲೆಕ್ಕ ಒಪ್ಪಿಸುವಂತದ್ದಾಗಿದೆ : "ನಿಮ್ಮ ಸಭಾನಾಯಕರ ಮಾತನ್ನು ಕೇಳಿರಿ, ಅವರಿಗೆ ಅಧೀನರಾಗಿರಿ. ಅವರು ಲೆಕ್ಕ ಒಪ್ಪಿಸಬೇಕಾದವರಾಗಿ ನಿಮ್ಮ ಆತ್ಮಗಳನ್ನು ಕಾಯುವವರಾಗಿದ್ದಾರೆ. ಅವರು ವ್ಯಸನಪಡದೆ ಸಂತೋಷದಿಂದ ಇದನ್ನು ಮಾಡುವಂತೆ ನೋಡಿರಿ; ಅವರು ವ್ಯಸನದಿಂದಿರುವದು ನಿಮಗೆ ಪ್ರಯೋಜನಕರವಾದದ್ದಲ್ಲ"** (ಇಬ್ರಿ. 13:17). ಸಭೆಯಲ್ಲಿ ಆತ್ಮಗಳು ಹಿಂಜರಿದು ಹೋಗುವುದಾದರೆ ಅಥವಾ ದುರ್ಬೋಧನೆಗೆ ಒಳಬಿದ್ದು ಮೋಸಹೋಗುವುದಾದರೆ ಅಥವಾ ಪಾಪದಲ್ಲಿ ಬಿದ್ದು ರಕ್ಷಣೆ ನಷ್ಟಪಡಿಸಿಕೊಳ್ಳುವುದಾದರೆ ದೇವರು ಸಭೆಯ ಆತ್ಮಗಳ ಲೆಕ್ಕವನ್ನು ಸಭಾ ನಾಯಕರಿಗೆ ಕೇಳುತ್ತಾನೆ. ಅದಕ್ಕಾಗಿ ನಾಯಕರು ನಮ್ಮನ್ನು ತಿದ್ದುವಾಗ, ಕ್ರಮಪಡಿಸುವಾಗ ಮಾರ್ಗದರ್ಶನ ಮಾಡುವಾಗ ನಾವು ಬಿಟ್ಟು ಕೊಡುವವರಾಗಿರಬೇಕು.

**ಮಹಿಳೆಯರ ಸ್ವರ**

4) **ನಾಯಕತ್ವದ ಅಧೀನತೆಯಲ್ಲಿ ಹೋಗುವುದು ಒಬ್ಬ ವಿಶ್ವಾಸಿಗೆ ಆಶೀರ್ವಾದವಾಗಿದೆ** :– ಎಲ್ಲಿವರೆಗೆ ನಮಗೆ ಮಾರ್ಗದರ್ಶನ ಮಾಡಲು ನಾಯಕತ್ವ ಇರುವುದಿಲ್ಲವೋ ಆಗ ನಾವು ತಪ್ಪಿ ಹೋಗುವಂತಹ ಅಪಾಯದಲ್ಲಿರುತ್ತೇವೆ. ನಾವು ರಕ್ಷಣೆಯಲ್ಲಿಯೂ, ನಂಬಿಕೆಯಲ್ಲಿಯೂ ಸುರಕ್ಷಿತರಾಗಿರಬೇಕಾದರೆ ನಮಗೆ ನಾಯಕತ್ವ ಅತೀ ಅವಶ್ಯಕವಾಗಿದೆ.

5) **ನಾಯಕತ್ವವನ್ನು ಅಸಡ್ಡೆ ಮಾಡಬಾರದು (ತಿರಸ್ಕರಿಸಬಾರದು):** ಅರಣ್ಯ. 16:1–5 ರಲ್ಲಿ ಕೋರಹ ದಾತನ್ ಅಬೀರಾಮರು ತಮ್ಮ ಮೇಲೆ ನಾಯಕರಾಗಿ ದೇವರು ನೇಮಿಸಿರುವ ಮೋಶೆ ಆರೋನನಿಗೆ ವಿರುದ್ಧವಾಗಿ ನಿಂತರು ಇದರ ಪರಿಣಾಮವಾಗಿ ಜೀವಂತವಾಗಿ ಪಾತಾಳಕ್ಕೆ ಇಳಿದು ಹೋದರು.

6) **ನಾಯಕರಿಗೆ ಗೌರವವನ್ನು ಕೊಡಬೇಕು : "ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ; ಯಾರಿಗೆ ಕಂದಾಯವೋ ಅವರಿಗೆ ಕಂದಾಯವನ್ನು, ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು, ಯಾರಿಗೆ ಭಯವೋ ಅವರಿಗೆ ಭಯವನ್ನು, ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ"** (ರೋಮ. 13:7).

7) **ನಾಯಕನಿಗೆ ಅಧೀನನಾಗಿರುವವನು ಭವಿಷ್ಯದಲ್ಲಿ ಉತ್ತಮ ನಾಯಕನಾಗುವನು** : ಯೆಹೋ. 11:15 ಯೆಹೋವನ ಸೇವಕನಾದ ಮೋಶೆಯ ದೇವರು ತನಗೆ ಹೇಳಿದ್ದನ್ನೆಲ್ಲಾ ಯೆಹೋಶುವನಿಗೆ ಹೇಳಿದನು ಯೆಹೋಶುವನು ಅದರಂತೆಯೇ ಮಾಡಿದನು. ಯೆಹೋವನು ಮೋಶೆಯ ಮೂಲಕ ಆಜ್ಞಾಪಿಸಿದ್ದರಲ್ಲಿ ಅವನು ಒಂದನ್ನು ಮೀರಲಿಲ್ಲ. ಯೆಹೋಶುವನು ತನ್ನ ಮೇಲಿರುವ ನಾಯಕನಾದ ಮೋಶೆಗೆ ಸಂಪೂರ್ಣವಾಗಿ ಅಧೀನನಾಗಿದ್ದನು. ಭವಿಷ್ಯದಲ್ಲಿ ಒಂದು ದಿನ ಯೆಹೋಶುವನು ನಾಯಕನಾದಾಗ ಇಸ್ರಾಯೇಲ್ಯರು ಯೆಹೋಶುವನಿಗೆ ಅಧೀನರಾದರು. ಯೆಹೋ. 414 ಆ ದಿವಸ ಯೆಹೋವನು ಯೆಹೋಶುವನನ್ನು ಇಸ್ರಾಯೇಲರ ದೃಷ್ಟಿಯಲ್ಲಿ ಘನಪಡಿಸಿದ್ದರಿಂದ ಅವರು ಮೋಶೆಯಲ್ಲಿ ಹೇಗೋ ಹಾಗೆಯೇ ಇವನಲ್ಲಿಯೂ ಇವನು ಜೀವದಿಂದಿದ್ದ ಕಾಲವೆಲ್ಲಾ ಭಯಭಕ್ತಿಯುಳ್ಳವರಾಗಿದ್ದರು.

VII) **ದೇವರ ಮಾತಿಗೆ ಅವಿಧೇಯತೆ ತೋರಿಸಿದರು** :– (ವಿಮೋ. 19:8, 24:3, 24:7) ಇಸ್ರಾಯೇಲರು ಐಗುಪ್ತದಿಂದ ಹೊರಗೆ ಬಂದು ತರುವಾಯ ದೇವರಿಗೆ ವಿಧೇಯ ರಾಗುತ್ತೇವೆಂಬುದಾಗಿ ಮಾತು ಕೊಟ್ಟಿದ್ದರು ಆದರೆ ಯಾವಾಗ ಕಾನಾನ್ ದೇಶಕ್ಕೆ ಮುಟ್ಟಿದರೋ ದೇವರ ಆಜ್ಞೆಗಳಿಗೆ ವಿರುದ್ಧವಾಗಿ ಜೀವಿಸಿದರು.

ಧರ್ಮೋ. 32:16 ಅವರು ಅನ್ಯದೇವರುಗಳನ್ನು ಪೂಜಿಸಿ ಆತನನ್ನು ರೇಗಿಸಿದರು, ನಿಷಿದ್ಧಾಚಾರಗಳನ್ನು ನಡಿಸಿ ಆತನಿಗೆ ಸಿಟ್ಟೇರಿಸಿದರು. ನಮ್ಮ ಜೀವಿತವು ದೇವರ ವಚನದ ಪ್ರಕಾರವಾಗಿರಬೇಕು ಆಗ ಮಾತ್ರ ದೇವರಿಂದ ಆಶೀರ್ವಾದ ಹೊಂದಲು ಸಾಧ್ಯ.

ದೇವರಿಗೆ ನಾವು ಮೂರು ವಿಧವಾಗಿ ಅಧೀನರಾಗಿರಬೇಕು:–

1. ದೇವರ ವಾಕ್ಯಕ್ಕೆ
2. ದೇವರ ಸೇವಕರಿಗೆ
3. ಪರಿಶುದ್ಧಾತ್ಮನಿಗೆ.

1) **ದೇವರ ವಾಕ್ಯಕ್ಕೆ** :– ಆಗ ಯೇಸು ತನ್ನನ್ನು ನಂಬಿದ

ನನ್ನ ಮಾತಿಗೆ ಕಿವಿಗೊಡುವವನಾದರೋ ಸ್ವಸ್ಥವಾಗಿರುತ್ತಾ ಯಾವ ಕೇಡಿಗೂ ಭಯಪಡದೆ ಸುರಕ್ಷಿತನಾಗಿರುವನು (ಜ್ಞಾನೋ. 1:33).

ಯೆಹೂದ್ಯರಿಗೆ ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು (ಯೋಹಾ. 8:31–32).

ಅನೇಕರು ಆ ಬಿಷೋಪ್ ಹೇಳಿದರೆ ನಂಬುತ್ತೇನೆ, ಆ ಪಾಸ್ಟರ್ ಹೇಳಿದರೆ ನಂಬುತ್ತೇನೆ ಎಂದು ಅನೇಕರು ತಮ್ಮ ನಂಬಿಕೆಯನ್ನು ಮನುಷ್ಯರ ಮೇಲೆ ಇಟ್ಟಿರುತ್ತಾರೆ. ಆ ಬಿಷೋಪ್ ಆಗಲಿ, ಪಾದ್ರಿಯಾಗಲಿ, ಪಾಸ್ಟರ್ ಆಗಲಿ ಹೇಳಿದಂಥ ವಾಕ್ಯ ಸತ್ಯವೇದದಲ್ಲಿದ್ದರೆ ಮಾತ್ರ ನಂಬುತ್ತೇನೆಂದು ಹೇಳುವವರು ಬಹಳ ಕಡಿಮೆ ಇದ್ದಾರೆ.

ಅ.ಕೃ. 17:11 ಆ ಸಭೆಯವರು ಥೆಸಲೋನಿಕದವರಿಗಿಂತ ಸದ್ಗುಣವುಳ್ಳವರಾಗಿದ್ದು ದೇವರ ವಾಕ್ಯವನ್ನು ಶುದ್ಧಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗಳನ್ನು ಶೋಧಿಸುತ್ತಿದ್ದರು.

ಇಂದು ನಾವು ಮಾಡುವ ಆರಾಧನೆ, ನಾವು ಮಾಡುವ ಪ್ರಾರ್ಥನೆ ನಾವು ಆಚರಿಸುವ ಆಚರಣೆ, ನಮ್ಮ ಸೇವೆ, ನಮ್ಮ ಪ್ರಸಂಗ ಎಲ್ಲವೂ ದೇವರ ವಾಕ್ಯಕ್ಕೆ ಅನುಗುಣವಾಗಿರಬೇಕು.

ಯಾಕೋ. 1:22 ವಾಕ್ಯದ ಪ್ರಕಾರ ನಡೆಯುವವರಾಗಿರಿ ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ.

2) **ದೇವರ ಸೇವಕರಿಗೆ** : 1 ಸಮು. 1:5 ನೀನಂತೂ ಮುದುಕನಾದಿ ನಿನ್ನ ಮಕ್ಕಳು ನಿನ್ನ ಮಾರ್ಗದಲ್ಲಿ ನಡೆಯುವುದಿಲ್ಲ ಆದುದರಿಂದ ಬೇರೆ ಎಲ್ಲಾ ಜನಾಂಗಗಳಿಗಿರುವಂತೆ ನಮಗೂ ಒಬ್ಬ ಅರಸನನ್ನು ನೇಮಿಸು ಅವನೇ ನಮ್ಮ ನ್ಯಾಯಸ್ಥಾಪಕನಾಗಿರಲಿ. ಇಸ್ರಾಯೇಲರು ಪ್ರವಾದಿಯಾದ ಸಾಮುವೇಲನನ್ನು ತಿರಸ್ಕರಿಸಿ ರಾಜ ರಾಜನಿಗಾಗಿ ಬೇಡುವುದನ್ನು ನಾವು ಕಾಣಬಹುದು ಅದಕ್ಕೆ ದೇವರು 1 ಸಮು. 8:6–9 ನ್ಯಾಯಸ್ಥಾಪನೆಗೋಸ್ಕರ ನಮಗೊಬ್ಬ ಅರಸನನ್ನು ನೇಮಿಸಿಕೊಡು ಎಂಬ ಮಾತಿಗೆ ಸಮುವೇಲನು ದು:ಖಪಟ್ಟು ಯೆಹೋವನನ್ನು ಪ್ರಾರ್ಥಿಸಲು ಆತನು ಅವನಿಗೆ ಜನರು ಹೇಳಿದಂತೆಯೇ ಮಾಡು ಅವರು ನಿನ್ನನ್ನಲ್ಲ ನನ್ನನ್ನು ತಿರಸ್ಕರಿಸಿದ್ದಾರೆ ನನ್ನ ಆಳ್ವಿಕೆಗೆ ಬೇಡವೆನ್ನುತ್ತಾರೆ. ನಾನು ಅವರನ್ನು ಐಗುಪ್ತ್ಯದಿಂದ ಬಿಡಿಸಿದಂದಿನಿಂದ ಇಂದಿನವರೆಗೂ ಅವರು ನನ್ನನ್ನು ಬಿಟ್ಟು ಅನ್ಯದೇವತೆಗಳನ್ನು ಸೇವಿಸಿದರು ನನಗೆ ಹೇಗೆ ಮಾಡಿದರೋ ಹಾಗೆಯೇ ನಿನಗೂ ಮಾಡುತ್ತಾರೆ. ನೀನು ಈಗ ಅವರು ಕೇಳಿಕೊಂಡಂತೆ ಮಾಡು ಆದರೆ ಅವರ ಮೇಲೆ ರಾಜನಿಗಿರುವ ಅಧಿಕಾರವೆಷ್ಟೆಂಬುದನ್ನು ಅವರಿಗೆ ತಿಳಿಸಿ ಎಚ್ಚರಿಸದೆ ಇರಬೇಡ ಎಂದು ಹೇಳಿದನು.

ಅನೇಕರು ದೇವರಿಗೆ ಅಧೀನನಾಗುತ್ತೇನೆ, ಸಭಾಪಾಲಕರಿಗೆ ಅಧೀನರಾಗಲ್ಲ ಎಂಬುದಾಗಿ ಹೇಳುವುದನ್ನು ಕೇಳಿದ್ದೇನೆ ದೇವರು ಹೇಳುತ್ತಾನೆ, ನಾನು ನೇಮಿಸಿದ ಸಭಾಪಾಲಕನಿಗೆ ಅಧೀನನಾಗಿರು ಆಗ ನೀನು ನನಗೆ ಅಧೀನನಾದಂತೆ ಎಂದು.

3) **ಪರಿಶುದ್ಧಾತ್ಮನಿಗೆ** :– ಪರಿಶುದ್ಧಾತ್ಮನು ತ್ರಯೇಕತ್ವದ ಮೂರನೆಯ ವ್ಯಕ್ತಿಯಾಗಿದ್ದಾನೆ. ಹಳೆಯ ಒಡಂಬಡಿಕೆಯಲ್ಲಿ 4 ವಿಧವಾದ ಅಭಿಷೇಕವಿದ್ದಿತು.

1) ರಾಜ 2)ಯಾಜಕ 3) ಪ್ರವಾದಿ 4) ನಾಯಕ (ನ್ಯಾಯಸ್ಥಾಪಕರು) ಪ್ರತಿಯೊಬ್ಬರನ್ನು ಕರ್ತನಿಗೆ ಉಪಯೋಗಿಸಲು ಇರುವಾಗ ದೇವರಾತ್ಮನು ಬರುತ್ತಿದ್ದನು ಹಾಗೆಯೇ ಕೆಲಸ ಆದ ಕೂಡಲೇ ಹಿಂತಿರುಗುತ್ತಿದ್ದನು ಆದರೆ ಹೊಸ ಒಡಂಬಡಿಕೆಯಲ್ಲಿ ಬರುತ್ತಾ ಹೋಗುತ್ತಾ ಇರುವಂಥವನಲ್ಲಾ, ಪರಿಶುದ್ಧಾತ್ಮನು ಯೋಹಾ. 14:16 ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವುದಕ್ಕೆ ಕೊಡುವನು. ಹೊಸ ಒಡಂಬಡಿಕೆಯಲ್ಲಿ ಬಂದಂತಹ ಪರಿಶುದ್ಧಾತ್ಮನು ಬಂದು ಹೋಗುತ್ತಾ ಇರುವುದಕ್ಕಾಗಿ ಅಲ್ಲ, ಆತನು ಒಂದು ಸಲ ಒಬ್ಬ ವ್ಯಕ್ತಿಯೊಳಗೆ ಬಂದರೆ ಸದಾಕಾಲ ಆತನೊಳಗಿರುವನು. ಒಬ್ಬ ವಿಶ್ವಾಸಿಯ ಜೀವಿತದಲ್ಲಿ ಪರಿಶುದ್ಧಾತ್ಮನಿಗೆ ಸಂಬಂಧವಾದ 3 ರೀತಿಯ ಅನುಭವಗಳಿವೆ.

1. ಪರಿಶುದ್ಧಾತ್ಮನು ಕ್ರೈಸ್ತ ವಿಶ್ವಾಸಿಯ ಒಳಗೆ ಬರುತ್ತಾನೆ.
2. ಪರಿಶುದ್ಧಾತ್ಮನು ಕ್ರೈಸ್ತ ವಿಶ್ವಾಸಿಯ ಮೇಲೆ ಬರುತ್ತಾನೆ.
3. ಕ್ರೈಸ್ತ ವಿಶ್ವಾಸಿಯು ಅನುದಿನದ ಜೀವಿತದಲ್ಲಿ

ಯೆಹೋವನು ತನ್ನ ಸೃಷ್ಟಿಕ್ರಮದಲ್ಲಿ ಮೊದಲು ನನ್ನನ್ನು ನಿರ್ಮಿಸಿದನು; ಆತನ ಪುರಾತನ ಕಾರ್ಯಗಳಲ್ಲಿ ನಾನೇ ಪ್ರಥಮ (ಜ್ಞಾನೋ. 8:22).

ಪರಿಶುದ್ಧಾತ್ಮನಿಂದ ಭರಿತನಾಗುತ್ತಾನೆ.

1) **ಪರಿಶದ್ಧಾತ್ಮನು ಕ್ರೈಸ್ತ ವಿಶ್ವಾಸಿಯ ಒಳಗೆ ಬರುತ್ತಾನೆ :–** ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆ ಇಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದ್ದೀರಿ (ಎಫೆ. 1:13).

ಒಬ್ಬ ಮನುಷ್ಯನು ತಾನು ಪಾಪಿ ಎಂದು ದೇವರ ಮುಂದೆ ಒಪ್ಪಿಕೊಂಡು ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರ ಬಳಿಯಲ್ಲಿ ಕ್ಷಮಾಪಣೆ ಕೇಳಿಕೊಂಡು ಕರ್ತನಾದ ಯೇಸುಕ್ರಿಸ್ತನು ತನಗಾಗಿ ಶಿಲುಬೆಯಲ್ಲಿ ಸತ್ತು (ಅಂದರೆ ತನ್ನ ಪಾಪದ ಶಿಕ್ಷೆಯನ್ನು ತನ್ನ ಮೇಲೆ ತೆಗೆದುಕೊಂಡನು ಎಂದು) ತನಗಾಗಿ ಹೂಣಲ್ಪಟ್ಟು ಮೂರನೆಯ ದಿನದಲ್ಲಿ ಮರಣದಿಂದ (ಮರಣವನ್ನು, ಪಾತಾಳವನ್ನು ಜಯಿಸಿ) ಎದ್ದು ಬಂದನು ಎಂದು ನಂಬಿ ಬಾಯಿಂದ ನಂಬಿದ್ದನ್ನು ಅರಿಕೆಮಾಡಿ ಕರ್ತನಾದ ಯೇಸು ಕ್ರಿಸ್ತನನ್ನು ತನ್ನ ಜೀವಿತದ ಸ್ವಂತ ರಕ್ಷಕನು ಒಡೆಯನಾಗಿ ಅಂಗೀಕರಿಸುವಾಗ ಅವನಿಗೆ (ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ಬಿಡುಗಡೆ ಸಿಗುತ್ತದೆ). ರಕ್ಷಣೆಯುಂಟಾಗುತ್ತದೆ. ಆ ಸಂದರ್ಭದಲ್ಲಿ ಒಂದು ಕಾರ್ಯ ನಡೆಯುತ್ತದೆ. ತ್ರಯೇಕತ್ವದ ಮೂರನೆಯ ವ್ಯಕ್ತಯಾಗಿರುವ ಪರಿಶುದ್ಧಾತ್ಮನು ಆ ಮನುಷ್ಯನ ಒಳಗಡೆ ಸದಾಕಾಲ ವಾಸ ಮಾಡಲು ಬರುತ್ತಾನೆ ಹಾಗೂ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದುತ್ತಾನೆ. ಈಗ ಪರಿಶುದ್ಧಾತ್ಮನು ಆ ಮನುಷ್ಯನ ಒಳಗೆ ಬಂದಿದ್ದಾನೆ. ಮುದ್ರೆ ಹೊಂದುವುದು ಅಂದರೆ ಲೋಕದಲ್ಲಿ ಅನುದಿನದ ಜೀವಿತದಲ್ಲಿ ನಾವು ನಮ್ಮ ಉಪಯೋಗಕ್ಕಾಗಿ ಅನೇಕ ಸಾಮಾನುಗಳನ್ನು ಉಪಯೋಗಿಸುತ್ತೇವೆ. ಉದಾಹರಣೆಗೆ ಒಂದು ಹಾಲಿನ ಡಬ್ಬಿಯನ್ನು ಅಂಗಡಿಯಿಂದ ತಂದರೆ ಅದು ಯಾವ ಕಂಪನಿಯಿಂದ ತಯಾರಿಸಲ್ಪಟ್ಟದ್ದು ಎಂದು ಅದರ ಮೇಲೆ ಆ ಕಂಪನಿಯ ಮುದ್ರೆ ನೋಡುವಾಗ ಗೋತ್ತಾಗುತ್ತದೆ. ಅದೇ ರೀತಿ ಒಬ್ಬ ವ್ಯಕ್ತಿ ಕರ್ತನಾದ ಯೇಸುಕ್ರಿಸ್ತನನ್ನು ತನ್ನ ಹೃದಯದಲ್ಲಿ ರಕ್ಷಕನಾಗಿ ಸ್ವೀಕರಿಸುವಾಗ ಪರಿಶುದ್ಧಾತ್ಮನು ಹೃದಯದ ಒಳಗಡೆ ಬಂದು ಮುದ್ರೆ ಹಾಕುತ್ತಾನೆ. ಆಗ ಸೈತಾನನಿಗೆ ಗೊತ್ತಾಗುತ್ತದೆ ಇವರು ರಕ್ಷಣೆ ಹೊಂದಿದವರು ಇವರೊಳಗೆ ಯೇಸು ಇದ್ದಾನೆ, ಪರಿಶುದ್ಧಾತ್ಮನು ಇದ್ದಾನೆ ಎಂದು.

**ಮುಂದುವರಿಯುವದು.........**


ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**



# ನಮ್ಮೊಂದಿಗೆ ಆಚರಿಸಿ





**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 0091 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.



## ಮಕ್ಕಳ ಸ್ವರ

1) ಯೇಸು ಎಲ್ಲಿ ಹುಟ್ಟಿದನು?

2) ಯೇಸುವಿಗೆ ಎಷ್ಟು ಮಂದಿ ಶಿಷ್ಯರಿದ್ದರು?

3) ಯೇಸುವನ್ನು ಹಿಡಿದುಕೊಟ್ಟವನ್ಯಾರು ?

4) ಯೇಸುಕ್ರಿಸ್ತನು ಹೇಗೆ ಸತ್ತನು?

5) ಯೇಸುಕ್ರಿಸ್ತನು ಹುಟ್ಟಿದಾಗ ಯಾರು ಕಾಣಿಕೆಯನ್ನು ಕೊಟ್ಟರು?

6) ಐದು ಸಾವಿರ ಜನರಿಗೆ ಯೇಸುಕ್ರಿಸ್ತನು ಏನನ್ನು ಕೊಟ್ಟನು?

7) ಯೇಸುಕ್ರಿಸ್ತನು ಶಿಷ್ಯರಿಗೆ ಹೇಗೆ ಪ್ರಾರ್ಥಿಸಲು ಕಲಿಸಿದನು?

8) ಯೇಸುಕ್ರಿಸ್ತನೊಂದಿಗೆ ತರ್ಕ ಮಾಡುತ್ತಿದ್ದವರು ಯಾರು?

9) ಲಾಜರನಿಗೆ ಯೇಸುಕ್ರಿಸ್ತನು ಏನು ಮಾಡಿದನು?

10) ಯೇಸುಕ್ರಿಸ್ತನ ತಾಯಿಯ ಹೆಸರೇನು?

**ಜೂನ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :–**

1) ಫಿಲಿಷ್ಟಿಯ ಹುಡುಗಿಯನ್ನು (ನ್ಯಾಯ. 14:18).
2) ಅಹೀನೋವಮಳು (1 ಸಮು. 14:47–50).
4) ಅಬ್ರಹಾಮನಿಗೆ (ಆದಿ. 21:5).
5) ತೆಕೋವದ (ಆಮೋ. 1:5).
6) ದೇವರ ಮನೆ (ಆದಿ. 28:19).
7) ಸಂಸೋನನು (ನ್ಯಾಯ. 14:6).
8) ನಿನೆವೆಗೆ (ಯೋನ. 1:5).
9) ಅಲ್ಲೋನ್ (ಆಮೋ. 2:9).
10) ಪವಿತ್ರಾಲಯಗಳು (ಆಮೋ. 7:9).

## ಬೇಕಾಗಿದ್ದಾರೆ

- **ಸ್ಟಾಫ್ ನರ್ಸ್ (ಜಿಎನ್ಎಮ್ ನರ್ಸ್ ಮತ್ತು ಬಿಎಸ್‌ಸಿ ನರ್ಸ್)**
- **ಎಮ್ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)**
- **ಎಮ್.ಬಿ.ಬಿ.ಎಸ್ ವೈದರು**
- **ಮನೋರೋಗ ತಜ್ಞ ವೈದ್ಯರು (ಸೈಕಿಯಾಟ್ರಿಸ್ಟ್)**
- **ಕ್ಲೀನರ್ ಮತ್ತು ವಾರ್ಡ್ ಬಾಯ್**
- **ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.**

**ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**0091–9902334941, 0091–820 2002781.**

ನೀನು ನನಗೆ ಸಹಾಯಕನಾಗಿದ್ದೀಯಲ್ಲಾ; ನಿನ್ನ ರೆಕ್ಕೆಗಳ ಮರೆಯಲ್ಲಿ ಸುರಕ್ಷಿತನಾಗಿದ್ದುಕೊಂಡು ಆನಂದಘೋಷ ಮಾಡುತ್ತಿರುವೆನು (ಕೀರ್ತ. 63:7).